بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 05

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 48

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

28 ನವೆಂಬರ್ 2024, 28 ನಬುವ್ವತ್ 1403 ಹಿಜರಿ ಶಮ್‌ಸಿ,
25 ಜಮಾದಿಉಲ್ ಅವ್ವಲ್ 1445 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ.

## ಅಲ್ಲಾಹನ ಉಪದೇಶ

وَمَنْ اَظْلَمُ مِمَّنِ افْتَرٰى
عَلَى اللّٰهِ كَذِبًا اَوْ كَذَّبَ بِاٰيٰتِهٖ ؕ
اِنَّهٗ لَا يُفْلِحُ الظّٰلِمُوْنَ (الانعام:22)

(ಅಲ್-ಅನ್‌ಆಮ್: 22)

**ಅಂದರೆ: ಅಲ್ಲಾಹನ ಬಗ್ಗೆ ಸುಳ್ಳನ್ನು ಸೃಷ್ಟಿಸಿ ಹೇಳುವವನಿಗಿಂತ ಅಥವಾ ಅವನ ದೃಷ್ಟಾಂತಗಳನ್ನು ಸುಳ್ಳೆಂದು ಬಗೆಯುವವನಿಗಿಂತ ದೊಡ್ಡ ಅಧರ್ಮಿ ಯಾರು? ಖಂಡಿತವಾಗಿಯೂ ಅಧರ್ಮಿಗಳು ವಿಜಯ ಹೊಂದಲಾರರು.**

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

**ಓರ್ವ ಮುಸ್ಲಿಮನು ಇನ್ನೋರ್ವ ಮುಸ್ಲಿಮನ ಸಹೋದರನಾಗಿದ್ದಾನೆ, ಅವನನ್ನು ಹಿಂಸಿಸಬಾರದು ಮತ್ತು ಅವನನ್ನು ಕ್ರೂರಿಗೆ ಒಪ್ಪಿಸಬಾರದು.**

**(2442)** ಹಝ್ರತ್ ಅಬ್ದುಲ್ಲ ಬಿನ್ ಉಮರ್(ರ) ವರದಿ ಮಾಡುತ್ತಾರೆ: ರಸೂಲುಲ್ಲಾಹ್ (ಸ) ನುಡಿದರು: ಓರ್ವ ಮುಸ್ಲಿಮನು ಇನ್ನೋರ್ವ ಮುಸಲ್ಮಾನನ ಸಹೋದರನಾಗಿದ್ದಾನೆ, ಅವನನ್ನು ಹಿಂಸಿಸಬಾರದು ಮತ್ತು ಅವನನ್ನು ಕ್ರೂರಿಗೆ ಒಪ್ಪಿಸಬಾರದು. ಯಾವ ವ್ಯಕ್ತಿ ತನ್ನ ಸಹೋದರನ ಕೆಲಸದಲ್ಲಿ ತೊಡಗಿರುವವನು. ಅಲ್ಲಾಹನು ಅವನ ಕೆಲಸದಲ್ಲಿ ತೊಡಗುತ್ತಾನೆ. ಯಾರು ಒಬ್ಬ ಮುಸ್ಲಿಮನ ನೋವನ್ನು ದೂರ ಮಾಡುವನು ಅಲ್ಲಾಹನು ಪುರುತ್ಥಾನದ ದಿನ ಅವನ ನೋವು ದೂರ ಮಾಡುವನು, ಯಾರು ಒಬ್ಬ ಮುಸ್ಲಿಮನ ಪಾಪಗಳನ್ನು ಮುಚ್ಚುವನು, ಅಲ್ಲಾಹನು ಸಹ ಪುನರುತ್ತಾನದ ದಿನ ಅವನ ಪಾಪಗಳನ್ನು ಮುಚ್ಚುವನು.

**(2444)** ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ, ರಸೂಲುಲ್ಲಾಹ್ (ಸ) ನುಡಿದರು: ತನ್ನ ಸಹೋದರನಿಗೆ ಸಹಾಯ ನೀಡಿ, ಅವನು ಕ್ರೂರಿಯಾಗಿರಲಿ ಅಥವಾ ಹಿಂಸೆಗೆ ಒಳಗಾಗಲಿ, ಸಹಾಬರು ಹೇಳಿದರು: ಯಾ ರಸೂಲಲ್ಲಾಹ್(ಸ)! ನಾವು ತುಳಿತಕ್ಕೊಳಗಾದವರಿಗೆ ಸಹಾಯ ಮಾಡುತ್ತೇವೆ, ಆದರೆ ಅವನು ಕ್ರೂರಿಯಾಗಿದ್ದರೆ ನಾವು ಅವನಿಗೆ ಹೇಗೆ ಸಹಾಯ ಮಾಡಬಹುದು. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ಅವನ ಕೈಗಳನ್ನು ದಬ್ಬಾಳಿಕೆ ಮಾಡುವುದರಿಂದ ತಡೆಯಿರಿ. **(ಸಹೀಹ್ ಬುಖಾರಿ, ಸಂಪುಟ-4, ಕಿತಾಬುಲ್ ಮಝಾಲಿಮ್, ಮುದ್ರಣ 2008 ಖಾದಿಯಾನ್)**

**'ಬದರ್' ವಾರಪತ್ರಿಕೆಯನ್ನು Online ಮುಖಾಂತರ ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್: https://akhbarbadr.in/Kannada/#gsc.tab=0**

## ಪ್ರಗತಿಯ ಏಕೈಕ ಮಾರ್ಗವೆಂದರೆ ದೇವರನ್ನು ಗುರುತಿಸಿಕೊಳ್ಳುವುದು ಮತ್ತು ಆತನೊಂದಿಗೆ ಜೀವಂತ ವಿಶ್ವಾಸವನ್ನು ಬೆಳೆಸಿಕೊಳ್ಳುವುದು

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ಇಸ್ಲಾಂ ಧರ್ಮವು ಯಾರನ್ನೂ ಸೋಮಾರಿಗಳನ್ನಾಗಿ ಮಾಡುವುದಿಲ್ಲ. ನಿಮ್ಮ ವ್ಯಾಪಾರ ಮತ್ತು ಉದ್ಯೋಗಗಳಲ್ಲಿಯೂ ನಿರತರಾಗಿರಿ. ಆದರೆ ಅವರ ಬಳಿ ದೇವರಿಗಾಗಿ ಯಾವ ಸಮಯವು ಖಾಲಿ ಇರುವುದು ನಾನು ಇಷ್ಟಪಡುವುದಿಲ್ಲ. ಹೌದು, ವ್ಯಾಪಾರದ ಸಮಯದಲ್ಲಿ ವ್ಯಾಪಾರ ಮಾಡಿ ಮತ್ತು ಆ ಸಮಯದಲ್ಲಿಯೂ ಸರ್ವಶಕ್ತನಾದ ಅಲ್ಲಾಹನ ಭಯವನ್ನು ಮನಸ್ಸಿನಲ್ಲಿಟ್ಟುಕೊಳ್ಳಿ, ಇದರಿಂದ ಅವರ ವ್ಯಾಪಾರವು ಆರಾಧನೆಯ ಬಣ್ಣವನ್ನು ತೆಗೆದುಕೊಳ್ಳುತ್ತದೆ. ನಮಾಝಿನ ಸಮಯದಲ್ಲಿ ನಮಾಝನ್ನು ಬಿಟ್ಟುಬಿಡಬೇಡಿ. ಪ್ರತಿಯೊಂದು ಸಂದರ್ಭದಲ್ಲೂ ಧರ್ಮಕ್ಕೆ ಆದ್ಯತೆ ನೀಡಿ. ಜಗತ್ತು ಗುರಿಯಾಗಬಾರದು, ನಿಜವಾದ ಗುರಿ ಧರ್ಮವಾಗಿರಬೇಕು. ಆಗ ಲೌಕಿಕ ಕೆಲಸಗಳೂ ಧರ್ಮವೇ ಆಗುತ್ತವೆ. ಸಹಾಬರನ್ನು[ರ] ನೋಡಿ ಕಷ್ಟಕಾಲದಲ್ಲೂ ದೇವರನ್ನು ಬಿಡಲಿಲ್ಲ. ಯುದ್ಧ ಮತ್ತು ಕತ್ತಿಯ ಸಮಯವು ಎಷ್ಟು ಅಪಾಯಕಾರಿಯಾಗಿದೆಯೆಂದರೆ ಅದರ ಆಲೋಚನೆಯು ಮನುಷ್ಯನನ್ನು ನರಳುವಂತೆ ಮಾಡುತ್ತದೆ. ಅಂತಹ ಕ್ರೋಧ ಮತ್ತು ಉತ್ಸಾಹದ ಸಂದರ್ಭದಲ್ಲೂ ಅವರು ದೇವರನ್ನು ನಿರ್ಲಕ್ಷಿಸಲಿಲ್ಲ. ಅವರು ನಮಾಝ್‌ಗಳನ್ನು ತಪ್ಪಿಸಲಿಲ್ಲ. ದುಆದೊಂದಿಗೆ ಕಾರ್ಯ ನಿರ್ವಹಿಸಿದರು. ಈಗ ಅವರು ಎಲ್ಲ ರೀತಿಯಲ್ಲೂ ಒತ್ತಾಯಿಸುವುದು ದುರಾದೃಷ್ಟದ ಸಂಗತಿಯಾಗಿದೆ. ದೊಡ್ಡ ದೊಡ್ಡ ಭಾಷಣಗಳನ್ನು ಮಾಡುತ್ತಾರೆ. ಮುಸ್ಲಿಮರು ಪ್ರಗತಿ ಹೊಂದಲು ಅವರು ಸಭೆಗಳನ್ನು ನಡೆಸುತ್ತಾರೆ, ಆದರೆ ಅವರು ದೇವರನ್ನು ಮರೆತುಬಿಡುತ್ತಾರೆ ಮತ್ತು ಅವನತ್ತ ಗಮನ ಹರಿಸುವುದಿಲ್ಲ. ಹೀಗಿರುವಾಗ ಅವರೆಲ್ಲರು ಲೌಕಿಕವಾಗಿರುವಾಗ ಅವರ ಶ್ರಮ ಸಾರ್ಥಕವಾಗುತ್ತದೆ ಎಂದು ನಿರೀಕ್ಷಿಸಬಹುದೇ? ನೆನಪಿಡಿ, **ಲಾ ಇಲಾಹ ಇಲ್ಲಲ್ಲಾಹ್** ಎಂಬುದು ಮನಸ್ಸಿನಲ್ಲಿ ಹುದುಗುವವರೆಗೆ ಮತ್ತು ತಮ್ಮ ಅಸ್ತಿತ್ವದ ಪ್ರತಿಯೊಂದು ಕಣದ ಮೇಲೆ ಇಸ್ಲಾಮ್ ಧರ್ಮದ ಬೆಳಕು ಮತ್ತು ಆಳ್ವಿಕೆ ಇರದಿದ್ದರೆ ಎಂದಿಗೂ ಪ್ರಗತಿ ಸಾಧಿಸಲು ಸಾಧ್ಯವಿಲ್ಲ. ಪಾಶ್ಚಿಮಾತ್ಯ ರಾಷ್ಟ್ರಗಳು ಪ್ರಗತಿ ಸಾಧಿಸುತ್ತಿವೆ ಎಂಬ ಉದಾಹರಣೆಯನ್ನು ನೀವು ಮುಂದಿರಿಸಿದರೆ, ಅವರ ವಿಷಯ ಬೇರೆಯಾಗಿದೆ ನಿಮಗೆ ಗ್ರಂಥವನ್ನು ನೀಡಲಾಗಿದೆ. ನಿಮ್ಮ ಮೇಲೆ ಪುರಾವೆಯನ್ನು ಪೂರೈಸಲಾಗಿದೆ. ಅವರಿಗೆ ಇದು ಪ್ರತ್ಯೇಕ ವಿಷಯ ಮತ್ತು ದೋಷಾರೋಪಣೆಯ ದಿನವಾಗಿದೆ. ನೀವು ಅಲ್ಲಾಹನ ಗ್ರಂಥವನ್ನು ತ್ಯಜಿಸಿದರೆ, ಈ ಜಗತ್ತಿನಲ್ಲಿ ನಿಮಗೆ ನರಕವಿದೆ.

ಇಂತಹ ಪರಿಸ್ಥಿತಿಯಲ್ಲಿ ಮುಸಲ್ಮಾನರ ಶ್ರೇಯೋಭಿವೃದ್ಧಿಗಾಗಿ ಸಂಘ-ಸಂಸ್ಥೆಗಳು ಸಮ್ಮೇಳನಗಳು ಬಹುತೇಕ ಎಲ್ಲ ಊರುಗಳಲ್ಲಿ ನಡೆಯುತ್ತಿದ್ದರೂ ಪವಿತ್ರ ಖುರ್‌ಆನ್ ಅನ್ನು ಇಮಾಮ್ ಮಾಡಿಕೊಳ್ಳಲು ಮತ್ತು ಅದನ್ನು ಅನುಸರಿಸಲು ಯಾವ ಇಸ್ಲಾಮಿನ ಸಹಾನುಭೂತಿಯ ಬಾಯಿಂದ ಬರುವುದಿಲ್ಲ. ಅವರು ಇಂಗ್ಲಿಷ್ ಓದಿರಿ, ಕಾಲೇಜು ನಿರ್ಮಾಣಮಾಡಿರಿ, ಬ್ಯಾರಿಸ್ಟರ್ ಆಗಿರಿ ಎಂದು ಮಾತ್ರ ಹೇಳುತ್ತಾರೆ. ಅವರಿಗೆ ದೇವರಲ್ಲಿ ನಂಬಿಕೆ ಇಲ್ಲ ಎಂಬುದನ್ನು ಇದು ತೋರಿಸುತ್ತದೆ. 10 ದಿನಗಳ ನಂತರ ಔಷಧವು ಪರಿಣಾಮಕಾರಿಯಾಗದಿದ್ದರೆ, ನುರಿತ ವೈದ್ಯರು ಸಹ ತಮ್ಮ ಚಿಕಿತ್ಸೆಯನ್ನು ಮರಳಿಸಿಕೊಳ್ಳುತ್ತಾರೆ. ಇಲ್ಲಿ,

*(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)*

## *129 ನೇ ಜಲ್ಸಾ ಸಾಲಾನ ಖಾದಿಯಾನ್ 27, 28, 29 ಡಿಸೆಂಬರ್ 2024ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 129ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

# ಖುತ್‌ಬ ಜುಮುಅ

ಬನೂ ಖುರ್ರೈಝಾರ ಈ ಬಂಧಿತ ಮಹಿಳೆಯರನ್ನು ವಿತರಿಸಲಾಯಿತು ಅಥವಾ ಮಾರಾಟ ಮಾಡಲಾಯಿತು, ಹಝ್ರತ್ ಪೈಗಂಬರ್(ಸ) ಅವರು ತಮ್ಮ ಮಹಾನ್ ಕರುಣೆ ಮತ್ತು ಮಹಿಳೆಯರ ಹಿತಚಿಂತಕರಾಗಿ ರೇಶ್ಮೆಯ ನೀರಿನಿಂದ ಬರೆಯಲು ಯೋಗ್ಯವಾದ ಆದೇಶವನ್ನು ನೀಡಿದರು. ಈ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಒಂದು ಆದೇಶವನ್ನು ನೀಡಿದರು. ಅದು ಹಝ್ರತ್ ಪೈಗಂಬರ್(ಸ)ರ ಕಾರುಣ್ಯದ ವಿಶಾಲತೆ ಮತ್ತು ಸ್ತ್ರೀಯರ ಹಿತೈಷಿ ಎಂಬ ರೀತಿಯಲ್ಲಿ ಸ್ವರ್ಣಲಿಪಿಯಿಂದ ಬರೆಯಲು ಯೋಗ್ಯವಾಗಿದೆ. ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ವಿತರಣೆ ಮಾಡಲ್ಪಡುವ ಅಥವಾ ಮಾರಾಟಗೊಳ್ಳಲ್ಪಡುವ ಮಹಿಳೆಯರ ಜೊತೆಗೆ ಸಣ್ಣ ಮಗು ಇರುವುದಾದರೆ ಮಗು ಪ್ರೌಢ ವಯಸ್ಸಿಗೆ ತಲುಪುವ ವರೆಗೆ ತಾಯಿಯಿಂದ ಬೇರ್ಪಡಿಸಬಾರದು. ಅದೇ ರೀತಿಯಲ್ಲಿ ಇಬ್ಬರು ಕಿರಿಯ ಸಹೋದರಿಗಳು ಇರುವುದಾದರೆ ಅವರನ್ನು ಸಹ ಪೌಢ ವಯಸ್ಸಿಗೆ ತಲುಪುವ ತನಕ ಬೇರ್ಪಡಿಸಬಾರದು.

ಔಸ್ ಗೋತ್ರದವರ ಕಡೆಯಿಂದ ಬನೂ ಖುರ್ರೈಝಾ ಅವರ ಶಿಫಾರಿಸ್ಸು ಆಲಿಸಿದ ನಂತರ ಹಝ್ರತ್ ಸಅದ್(ರ) ಹೇಳಿದರು: ನಾನು ಸರ್ವಶಕ್ತನಾದ ಅಲ್ಲಾಹನ ಬಗ್ಗೆ ಯಾವನೇ ದೂಷಿಸುವವನ ದೂಷಣೆಯನ್ನು ಪರಿವೆ ಮಾಡದಂತಹ ಸಮಯವಾಗಿದೆ.

ಬನೂ ಖುರ್ರೈಝಾರ ವಿಷಯಕ್ಕೆ ಸಂಬಂಧಿಸಿದಂತೆ ನಿರ್ಧಾರ ಕೈಗೊಳ್ಳಲು ಹಝ್ರತ್ ಸಅದ್(ರ) ಆಗಮಿಸಿದಾಗ ಹಝ್ರತ್ ಪೈಗಂಬರ್(ಸ)ರು ಹೇಳಿದರು: ನೀವು ನಿಮ್ಮ ನಾಯಕನನ್ನು ಗೌರವಿಸಲು ಎದ್ದುನಿಂತುಕೊಳ್ಳಿ. ಇನ್ನೊಂದು ಹದೀಸಿನಲ್ಲಿ ಹಝ್ರತ್ ಪೈಗಂಬರ್(ಸ) ನಿಮ್ಮ ಈ ಅತ್ಯುತ್ತಮ ಮನುಷ್ಯನ ಪರವಾಗಿ ನಿಲ್ಲಲು ಹೇಳಿದರು.

ಹಝ್ರತ್ ಸಅದ್(ರ) ಹೇಳಿದರು: ನಾನು ಅವರ ಬಗ್ಗೆ ನಿರ್ಧರಿಸುವುದೇನೆಂದರೆ, ಅವರ ವಯಸ್ಕ ಪುರುಷರನ್ನು ವಧಿಸಬೇಕು ಮತ್ತು ಅವರ ಮಹಿಳೆಯರು ಮತ್ತು ಮಕ್ಕಳನ್ನು ಬಂಧಿಸಬೇಕು ಮತ್ತು ಅವರ ಆಸ್ತಿಯನ್ನು ಹಂಚಬೇಕು ಮತ್ತು ಮನೆಗಳನ್ನು ಮುಹಾಜಿರೀನರಿಗೆ ನೀಡಬೇಕು ಅನ್ಸಾರ್‌ಗಳಿಗೆ ಅಲ್ಲ. ಅದಕ್ಕೆ ಅನ್ಸಾರ್ ಹೇಳಿದರು: ನಾವು ಅವರ ಸಹೋದರರು, ಅವರೊಂದಿಗೆ ನಾವಿದ್ದೇವು. ಅದಕ್ಕೆ ಅವರು ಹೇಳಿದರು ಅವರು ನಿಮ್ಮಿಂದ ಮುಕ್ತರಾಗಬೇಕೆಂದು ನಾನು ಬಯಸುತ್ತೇನೆ. ಅಂದರೆ ಮುಹಾಜಿರೀನರು ತಮ್ಮ ಕೆಲಸವನ್ನು ಸ್ವತಂತ್ರವಾಗಿ ಮಾಡಬೇಕು.

ಹಝ್ರತ್ ಪೈಗಂಬರ್(ಸ)ರು ಹೇಳಿದರು: ಸಅದ್! ಏಳು ಆಕಾಶಗಳ ಮೇಲೆ ಅಲ್ಲಾಹನು ಮಾಡಿದ ಅಲ್ಲಾಹನ ನಿರ್ಧಾರದ ಪ್ರಕಾರ ನಿಮ್ಮ ನಿರ್ಧಾರವಾಗಿದೆ.

ಒಂದು ಹದೀಸಿನಲ್ಲಿ ಹಝ್ರತ್ ಪೈಗಂಬರ್(ಸ)ರು ಹಝ್ರತ್ ಸಅದ್(ರ) ಅವರ ನಿರ್ಧಾರದ ಬಗ್ಗೆ ಹೇಳಿದರು. ಇದೇ ನಿರ್ಧಾರದ ಬಗ್ಗೆ ದೇವದೂತರು ನನಗೆ ಸಹ್ರಿಯ ಸಮಯದಲ್ಲಿ ತಿಳಿಸಿದರು.

**ಬನೂ ಖುರ್ರೈಝಾ ಯುದ್ಧದ ಮುಕ್ತಾಯದಲ್ಲಿ ಬನೂ ಖುರ್ರೈಝಾ ಅವರಿಗೆ ವಿಧಿಸಲಾದ ಶಿಕ್ಷೆ ಹಾಗೂ ಇತರ ಪರಿಸ್ಥಿತಿಗಳ ಮತ್ತು ಘಟನೆಗಳ ವಿವರಾತ್ಮಕ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **25–10–2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ ۔ اَلرَّحْمٰنِ الرَّحِيمِ ۔ مٰلِكِ يَوْمِ الدِّينِ ۔

إِيَّاكَ نَعْبُدُ وَإِيَّاكَ نَسْتَعِينُ ۔ اِهْدِنَا الصِّرَاطَ الْمُسْتَقِيمَ ۔

صِرَاطَ الَّذِينَ أَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّالِّينَ ۔

ಬನೂ ಖುರ್ರೈಝ಼ ಗೋತ್ರದವರು ಒಪ್ಪಂದವನ್ನು ಮುರಿದ ಕಾರಣದಿಂದ ಅಹ್‌ಝ಼ಾಬ್ ಯುದ್ಧದ ನಂತರ ಅವರ ಕೋಟೆಗಳಿಗೆ ಮುತ್ತಿಗೆ ಹಾಕಲಾಗುತ್ತಿತ್ತು. ಮುಸ್ಲಿಮರಿಗೆ ನಷ್ಟ ಉಂಟುಮಾಡಿದ್ದಕ್ಕೆ ಮತ್ತು ಒಪ್ಪಂದವನ್ನು ಮುರಿದ ಕಾರಣದಿಂದ ಅವರಿಗೆ ಶಿಕ್ಷೆ ನೀಡಲಿಕ್ಕೆ ಹೀಗೆ ಮಾಡಲಾಗಿತ್ತು.

ಇದರ ಬಗ್ಗೆ ಕಳೆದ ಖುತ್ಬದಲ್ಲಿ ಪ್ರಸ್ತಾಪಿಸಲಾಗಿತ್ತು. ಅದರ ಇನ್ನಷ್ಟು ವಿವರಣೆ ಹೀಗಿದೆ: ಮುತ್ತಿಗೆ ತೀವ್ರಗೊಂಡಾಗ ಹಝ್ರತ್ ಪೈಗಂಬರ್(ಸ)ರ ತೀರ್ಪು ಪ್ರಕಾರ ಬನೂ ಖುರ್ರೈಝ಼ ಗೋತ್ರದವರು ಕೋಟೆಗಳಿಂದ ಹೊರಗೆ ಬಂದರು. (ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ–5, ಪುಟ–9, ದಾರುಲ್ ಕುತುಬ್ ಇಲ್‌ಮಿಯಾ 1993)

ಬನೂ ಖುರ್ರೈಝಾ ಅವರ ಮುತ್ತಿಗೆ ಎಷ್ಟು ಕಾಲ ನಡೆಯಿತು ಎಂಬುದರ ಬಗ್ಗೆ ವಿಭಿನ್ನ ವರದಿಗಳಿವೆ. ಕೆಲವು ವರದಿಗಳು ಹತ್ತು ದಿನಗಳವರೆಗೆ ಎಂದು ಹೇಳುತ್ತಿದೆ. ಕೆಲವು ಹದಿನೈದು ದಿನಗಳು, ಕೆಲವು ಹದಿನಾಲ್ಕು ದಿನಗಳು ಮತ್ತು ಕೆಲವು ಸ್ಥಳಗಳಲ್ಲಿ ಇಪ್ಪತ್ತೈದು ದಿನಗಳನ್ನು ಉಲ್ಲೇಖಿಸಲಾಗಿದೆ. (ಅತ್ತಬಖಾತುಲ್ ಕುಬ್ರ, ಸಂಪುಟ–2, ಪುಟ–57,59, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 1990) (ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ–5, ಪುಟ–20, ದಾರುಲ್ ಕುತುಬ್ ಇಲ್‌ಮಿಯಾ 1993)

ಚರಿತ್ರೆಯ ವಿವಿಧ ವರದಿಗಳನ್ನು ಉಲ್ಲೇಖಿಸಿ ಈ ಮುತ್ತಿಗೆಯ ಕಾಲಾವಧಿ ಸುಮಾರು ಇಪ್ಪತ್ತು ದಿನಗಳಷ್ಟು ಆಗಿತ್ತು ಎಂದು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳಿರುವರು. (ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–599)

ಬನೂ ಖುರ್ರೈಝ಼ ಗೋತ್ರದವರ ಬಗ್ಗೆ ತೀರ್ಪು ನೀಡಲು ಹಝ್ರತ್ ಸಅದ್ ಬಿನ್ ಮುಆಧ್(ರ)ರನ್ನು ತೀರ್ಪುಗಾರನಾಗಿ ಮಾಡಲಾಗಿತ್ತು. ಅದರ ವಿವರಣೆ ಹೀಗಿದೆ: ಯಹೂದಿಯರನ್ನು ಬಂಧಿಸಲು ಹಝ್ರತ್ ಪೈಗಂಬರ್(ಸ) ಆದೇಶ ನೀಡಿದಾಗ ಅವರನ್ನು ಹಗ್ಗಗಳಿಂದ ಕಟ್ಟಲಾಯಿತು. ಈ ಕಾರ್ಯ ಹಝ್ರತ್ ಮುಹಮ್ಮದ್ ಬಿನ್ ಮುಸಲ್ಲಮ(ರ) ಅವರ ನೇತೃತ್ವದಲ್ಲಿ ನಡೆಯಿತು. ಮಹಿಳೆಯರನ್ನು ಮತ್ತು ಮಕ್ಕಳನ್ನು ಬೇರ್ಪಡಿಸಲಾಗಿತ್ತು. ಅವರ ಕೋಟೆಗಳಿಂದ ಸಾವಿರದ ಐನ್ನೂರು ಖಡ್ಗಗಳು, ಮುನ್ನೂರು ಯುದ್ಧವಸ್ತ್ರಗಳು, ಎರಡು ಸಾವಿರ ಈಟಿಗಳು, ಸಾವಿರದ ಐನ್ನೂರು ಚರ್ಮದ ಗುರಾಣಿಗಳು ಮತ್ತು ಅನೇಕ ಪಾತ್ರೆಗಳು ಲಭಿಸಿದ್ದುವು. ಒಂಟೆಗಳು ಮತ್ತು ಇತರ ಜಾನುವಾರುಗಳು ಕೂಡ ಲಭಿಸಿದ್ದುವು. ಅವೆಲ್ಲವನ್ನು ಒಟ್ಟುಗೂಡಿಸಲಾಯಿತು. ಬನೂ ಖುರ್ರೈಝ಼ ಗೋತ್ರ ನಮ್ಮ ಮಿತ್ರ ಪಕ್ಷವಾಗಿದೆ; ಆದ್ದರಿಂದ ಅವರನ್ನು ಕ್ಷಮಿಸಿರಿ ಎಂದು ಔಸ್ ಗೋತ್ರದ ಪ್ರಮುಖರು ಹಝ್ರತ್ ಪೈಗಂಬರ್(ಸ)ರೊಡನೆ ಹೇಳಿದರು. ಅವರು ಒತ್ತಾಯಪಡಿಸಿದಾಗ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ನಿಮ್ಮಲ್ಲಿ ಒಬ್ಬ ವ್ಯಕ್ತಿಗೆ ಅವರ ಬಗ್ಗೆ ತೀರ್ಪು ನೀಡುವ ಹೊಣೆಗಾರಿಕೆಯನ್ನು ವಹಿಸಿಕೊಡಲು ನೀವು ಒಪ್ಪುತ್ತೀರಾ? ಅವರು

ಸಮ್ಮತಿಸಿದಾಗ ಈ ವಿಷಯವನ್ನು ಹಝ್ರತ್ ಸಅದ್ ಬಿನ್ ಮುಆಧ್(ರ)ರಿಗೆ ಒಪ್ಪಿಸಲಾಯಿತು.

ಮತ್ತೊಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಪೈಗಂಬರ್(ಸ) ಹೇಳಿದರು: ನನ್ನ ಸಹಾಬಿಯರಲ್ಲಿ ಯಾರನ್ನು ಬೇಕಾದರೂ ನೀವು ಆಯ್ಕೆ ಮಾಡಿರಿ. ಆಗ ಅವರು ಹಝ್ರತ್ ಸಅದ್ ಬಿನ್ ಮುಆಧ್(ರ)ರನ್ನು ಆಯ್ಕೆ ಮಾಡಿದರು. ಹಝ್ರತ್ ಪೈಗಂಬರ್(ಸ)ರು ಅದನ್ನು ಒಪ್ಪಿಕೊಂಡರು. ಹಝ್ರತ್ ಸಅದ್(ರ) ಔಸ್ ಗೋತ್ರದ ಮುಖಂಡರಾಗಿದ್ದರು ಮತ್ತು ಬನೂ ಖುರೈಝ ಗೋತ್ರದ ಮಿತ್ರರಾಗಿದ್ದರು. ಆದ್ದರಿಂದ ವಿಷಯ ನಮ್ಮ ಪರವಾಗಿ ಇರುವುದು ಮತ್ತು ಅರೇಬಿಯದ ಸಂಪ್ರದಾಯ ಪ್ರಕಾರ ಹಝ್ರತ್ ಸಅದ್(ರ) ತಮ್ಮ ಮಿತ್ರ ಗೋತ್ರಕ್ಕಾಗಿ ರಿಯಾಯಿತಿ ಮಾಡುವರು ಎಂದು ಅವರು ಭಾವಿಸಿದರು. ಆದರೆ ಹಝ್ರತ್ ಸಅದ್(ರ)ರ ಪರಿಶುದ್ಧ ಮತ್ತು ಪ್ರಾಮಾಣಿಕ ಹೃದಯವು ಅಲ್ಲಾಹನಿಗೆ ಮತ್ತು ಅವನ ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಇತರ ಎಲ್ಲ ಸಂಬಂಧಗಳಿಗಿಂತ ಪ್ರಾಮುಖ್ಯತೆ ನೀಡಿತ್ತು. ಹಝ್ರತ್ ಸಅದ್(ರ) ಆ ಸಮಯದಲ್ಲಿ ಮದೀನಾದ ಮಸೀದಿಯಲ್ಲಿ ರಫಿದಾ ಅಸ್ಲಮಿಯಾ ಅವರ ಡೇರೆಯಲ್ಲಿದ್ದರು. ಆಕೆ ಗಾಯಾಳುಗಳಿಗೆ ಬ್ಯಾಂಡೇಜ್ ಹಾಕುತ್ತಿದ್ದಳು ಮತ್ತು ಮಸೀದಿಯಲ್ಲಿಯೇ ಅವರ ಡೇರೆ ಇತ್ತು. ಹಝ್ರತ್ ಪೈಗಂಬರ್(ಸ)ರು ಹಝ್ರತ್ ಸಅದ್(ರ) ಅವರಿಗೆ ಆ ಡೇರೆಯಲ್ಲಿ ಇರಿಸಿದ್ದರು, ಇದರಿಂದಾಗಿ ಅವರು ಚಿಕಿತ್ಸೆಯನ್ನು ಮೇಲ್ವಿಚಾರಣೆ ಮಾಡಲು ಮತ್ತು ಅವರ ಸಹಾಯದಿಂದ ಗಾಯಗೊಂಡವರನ್ನು ಭೇಟಿ ಮಾಡಬಹುದು. ಹಝ್ರತ್ ಪೈಗಂಬರ್(ಸ)ರು ಹಝ್ರತ್ ಸಅದ್ ಬಿನ್ ಮುಆದ್(ರ) ಅವರಿಗೆ ಈ ವಿಷಯವನ್ನು ಒಪ್ಪಿಸಿದಾಗ, ಔಸ್ ಗೋತ್ರದ ಜನರು ಅವರ ಬಳಿಗೆ ಹೋಗಿ ಅವರನ್ನು ಖರ್ಜೂರದ ತೊಗಟೆಯಿಂದ ಮಾಡಿದ ಥಡಿ ಆ ಥಡಿಯ ಮೇಲೆ ಚರ್ಮದ ಹಾಸಿಗೆಯನ್ನು ಹಾಸಿಸಲಾದ ಕತ್ತೆಯ ಮೇಲೆ ಹತ್ತಿಸಿದರು. ಅದರ ಲಗಾಮು ಕೂಡ ಖರ್ಜೂರದ ನಾರುಗಳಿಂದ ಮಾಡಲ್ಪಟ್ಟಿತ್ತು. ಹಝ್ರತ್ ಸಅದ್(ರ) ಭಾರೀ ಯುವಕರಾಗಿದ್ದರು. ಜನರು ಹಝ್ರತ್ ಸಅದ್(ರ) ಅವರ ಸುತ್ತಲೂ ಒಟ್ಟುಗೂಡಿದರು ಮತ್ತು ಹೇಳಿದರು: ಓ ಅಬು ಅಮ್ರ್! ಹಝ್ರತ್ ಪೈಗಂಬರ್(ಸ)ರು ಔಸ್ ಗೋತ್ರದ ಮಿತ್ರಪಕ್ಷರ ವಿಷಯವನ್ನು ನೀವು ಅವರೊಂದಿಗೆ ಉಪಕಾರದಿಂದ ವರ್ತಿಸಲು ನಿಮಗೆ ವಹಿಸಿಕೊಟ್ಟಿದ್ದಾರೆ. ಹಾಗಾಗಿ ನೀವು ಅವರೊಂದಿಗೆ ಉಪಕಾರ ಮಾಡಿರಿ. ಅಷ್ಟರಲ್ಲಿ ಇನ್ನೂ ಹಲವರು ಜನರು ಜಮಾಯಿಸಿದರೂ ಹಝ್ರತ್ ಸಅದ್(ರ) ಮೌನವಾಗಿದ್ದರು. ಜನರ ಒತ್ತಾಯ ಹೆಚ್ಚಾದಾಗ ಹಝ್ರತ್ ಸಅದ್(ರ) ಹೇಳಿದರು: ನಾನು ಸರ್ವಶಕ್ತನಾದ ಅಲ್ಲಾಹನ ಬಗ್ಗೆ ಯಾವನೇ ದೂಷಿಸುವವನ ದೂಷಣೆಯನ್ನು ಪರಿವೆ ಮಾಡದಂತಹ ಸಮಯವಾಗಿದೆ.

ಹಝ್ರತ್ ಸಅದ್(ರ) ಅವರು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದರು ಮತ್ತು ಜನರು ಸಹ ಅವರ ಬಳಿ ಕುಳಿತಿದ್ದರು. ಹಝ್ರತ್ ಸಅದ್ ಬಿನ್ ಮುಆದ್ ಬಂದಾಗ, ಬುಖಾರಿ ಮತ್ತು ಮುಸ್ಲಿಮ್‌ನಲ್ಲಿದೆ, ಅವರು ಹಝ್ರತ್ ಪೈಗಂಬರ್(ಸ)ರು ಇದ್ದ ಆ ಮಸೀದಿಯ ಬಳಿ ಬಂದಾಗ ಮತ್ತು ಆ ಮಸೀದಿಯನ್ನು ಬನೂ ಖುರೈಝಾರ ಮುತ್ತಿಗೆಯ ಸಂದರ್ಭದಲ್ಲಿ ನಮಾಝ್ ನಿರ್ವಹಿಸಲು ಸಿದ್ಧಪಡಿಸಲಾಗಿತ್ತು. ಅವರನ್ನು ಕಂಡು ಹಝ್ರತ್ ಪೈಗಂಬರ್(ಸ)ರು ಹೇಳಿದರು: ನೀವು ನಿಮ್ಮ ನಾಯಕನನ್ನು ಗೌರವಿಸಲು ಎದ್ದುನಿಂತುಕೊಳ್ಳಿ. ಇನ್ನೊಂದು ಹದೀಸಿನಲ್ಲಿ ಹಝ್ರತ್ ಪೈಗಂಬರ್(ಸ) ನಿಮ್ಮ ಈ ಅತ್ಯುತ್ತಮ ಮನುಷ್ಯನ ಪರವಾಗಿ ನಿಲ್ಲಲು ಹೇಳಿದರು ಎಂದು ವರದಿಯಾಗಿದೆ.

ಬನೂ ಅಬ್ದ್ ಅಶ್‌ಹಲ್ ಹೇಳುತ್ತಾರೆ: ನಾವು ಹಝ್ರತ್ ಸಅದ್(ರ)ಗಾಗಿ ಎರಡು ಸಾಲುಗಳಲ್ಲಿ ನಿಂತಿದ್ದೆವು. ಅವರು ಹಝ್ರತ್ ಪೈಗಂಬರ್(ಸ) ಅವರ ಸನ್ನಿಧಿಗೆ ತಲುಪುವವರೆಗೂ ನಾವು ಪ್ರತಿಯೊಬ್ಬರೂ ಅವರನ್ನು ಸ್ವಾಗತಿಸುತ್ತಲೇ ಇದ್ದೆವು. ಹಝ್ರತ್ ಪೈಗಂಬರ್(ಸ) ಹೇಳಿದರು: ಓ ಸಅದ್!! ನೀವು ಅವರ ನಡುವೆ ನಿರ್ಧರಿಸಿ. ಅವರು ಹೇಳಿದರು: ಅಲ್ಲಾಹ್ ಮತ್ತು ಅಲ್ಲಾಹನ ಪ್ರವಾದಿಗಳು ತೀರ್ಪು ನೀಡುವುದಕ್ಕಾಗಿ ಹೆಚ್ಚು ಅರ್ಹರು. ಹಝ್ರತ್ ಪೈಗಂಬರ್(ಸ) ಹೇಳಿದರು: ನಿಸ್ಸಂದೇಹವಾಗಿಯು ಸರ್ವಶಕ್ತನಾದ ಅಲ್ಲಾಹನು ನಿಮಗೆ ಅವರ ಬಗ್ಗೆ ನಿರ್ಧರಿಸಲು ಆದೇಶಿಸಿದ್ದಾನೆ. ಔಸ್ ನ ಜನರು ಹೇಳಿದರು, ಓ ಅಬೂ ಅಮ್ರ್! ಹಝ್ರತ್ ಪೈಗಂಬರ್(ಸ)ರವರು ನಿಮ್ಮ ಮಿತ್ರರ ನಿರ್ಧಾರವನ್ನು ನಿಮಗೆ ವಹಿಸಿಕೊಟ್ಟಿದ್ದಾರೆ. ಆದ್ದರಿಂದ ಅವರೊಂದಿಗೆ ನೀವು ಉತ್ತಮವಾಗಿ ವರ್ತಿಸಿರಿ ಮತ್ತು ಅವರ ಸಮಸ್ಯೆಗಳನ್ನು ನಿಮ್ಮ ಮುಂದೆ ಇರಿಸಿ. ಹಝ್ರತ್ ಸಅದ್(ರ) ಹೇಳಿದರು, ಬನೂ ಖುರೈಝಾಗೆ ಸಂಬಂಧಿಸಿದಂತೆ ನನ್ನ ನಿರ್ಧಾರವನ್ನು ನೀವು ಒಪ್ಪುತ್ತೀರಾ? ಅದಕ್ಕೆ ಅವರು ಹೇಳಿದರು: ಹೌದು, ನೀವು ನಮ್ಮೊಂದಿಗೆ ಇಲ್ಲದ ಸಮಯದಿಂದ ನಾವೆಲ್ಲರು ನಿಮ್ಮ ನಿರ್ಧಾರದಿಂದ ತೃಪ್ತರಾಗಿದ್ದೇವೆ ಅಂದರೆ ನಿಮ್ಮ ಅನುಪಸ್ಥಿತಿಯಲ್ಲಿಯೂ ನಾವು ನಿಮ್ಮ ಹೆಸರನ್ನು ಸೂಚಿಸಿದ್ದೇವೆ. ನಮ್ಮ ಪರವಾಗಿ ನಿಮಗೆ ಅಧಿಕಾರವಿದೆ, ನೀವು ನಮ್ಮ ಮಿತ್ರ ಬನೂಖೈನಖಾ ಅವರೊಂದಿಗೆ ಉಪಕಾರ ಮಾಡಿದಂತೆ ನೀವು ನಮಗೆ ಒಲವು ತೋರುತ್ತೀರಿ ಎಂದು ನಾವು ಭಾವಿಸುತ್ತೇವೆ ಮತ್ತು ನೀವು ನಮ್ಮ ಆದ್ಯತೆಯಾಗಿದ್ದೀರಿ ಮತ್ತು ಇಂದು ನಮಗೆ ನಿಮ್ಮ ತೀರ್ಪಿನ ಅವಶ್ಯಕತೆಯಿದೆ. ಹಝ್ರತ್ ಸಅದ್(ರ) ಹೇಳಿದರು, ನಾನು ನನ್ನ ಕೈಲಾದಷ್ಟು ಪ್ರಯತ್ನಿಸುತ್ತೇನೆ. ಆಗ ಜನರು ನಾನು ನನ್ನ ಕೈಲಾದಷ್ಟು ಪ್ರಯತ್ನಿಸುತ್ತೇನೆ ಎಂದು ಹೇಳುವುದರಲ್ಲಿ ನಿಮ್ಮ ಅರ್ಥವೇನು? ಹಝ್ರತ್ ಸಅದ್(ರ) ಹೇಳಿದರು, ಅಲ್ಲಾಹನ ವಾಗ್ದಾನದ ಮೇಲೆ ಪ್ರಮಾಣ ಮಾಡಿ ಕೇಳುತ್ತೇನೆ ನನ್ನ ನಿರ್ಧಾರವನ್ನು ಜಾರಿಗೊಳಿಸಲಾಗುತ್ತದೆಯೇ? ದೃಢೀಕರಿಸಲು ಅವರು ಮತ್ತೊಮ್ಮೆ ಕೇಳಿದರು. ಅದಕ್ಕೆ ಅವರೆಲ್ಲರು ಹೌದು ಎಂದು ಹೇಳಿದರು. ಆಗ ಹಝ್ರತ್ ಸಅದ್(ರ) ಹಝ್ರತ್ ಪೈಗಂಬರ್(ಸ)ರು ಇದ್ದ ಕಡೆಗೆ ತಿರುಗಿದರು. ಹಝ್ರತ್ ಪೈಗಂಬರ್(ಸ)ರವರು ಮತ್ತು ಆ ಜನರೆಲ್ಲರು ಹೌದು ಎಂದು ಹೇಳಿದರು. ಅವರು ಹಝ್ರತ್ ಪೈಗಂಬರ್(ಸ)ರ ಮಹಿಮೆ ಮತ್ತು ಗೌರವದಿಂದಾಗಿ ಅವರು ಹಝ್ರತ್ ಪೈಗಂಬರ್(ಸ) ರನ್ನು ಉದ್ದೇಶಿಸಿ ಮಾತನಾಡದೆ ಇಲ್ಲಿ ಕುಳಿತಿರುವ ಜನರು ಸಹ ಈ ಭರವಸೆ ನೀಡುತ್ತಾರೆಯೇ ಎಂದು ಹೇಳಿದರು. ನಂತರ ಹಝ್ರತ್ ಸಅದ್(ರ) ಹೇಳಿದರು: ನಾನು ಅವರ ಬಗ್ಗೆ ನಿರ್ಧರಿಸುವುದೇನೆಂದರೆ, ಅವರ ವಯಸ್ಕ ಪುರುಷರನ್ನು ವಧಿಸಬೇಕು ಮತ್ತು ಅವರ ಮಹಿಳೆಯರು ಮತ್ತು ಮಕ್ಕಳನ್ನು ಬಂಧಿಸಬೇಕು ಮತ್ತು ಅವರ ಆಸ್ತಿಯನ್ನು ಹಂಚಬೇಕು ಮತ್ತು ಮನೆಗಳನ್ನು ಮುಹಾಜಿರೀನರಿಗೆ ನೀಡಬೇಕು ಅನ್ಸಾರ್‌ಗಳಿಗೆ ಅಲ್ಲ. ಅದಕ್ಕೆ ಅನ್ಸಾರ್ ಹೇಳಿದರು: ನಾವು ಅವರ ಸಹೋದರರು, ಅವರೊಂದಿಗೆ ನಾವಿದ್ದೇವು. ಅದಕ್ಕೆ ಅವರು ಹೇಳಿದರು ಅವರು ನಿಮ್ಮಿಂದ ಮುಕ್ತರಾಗಬೇಕೆಂದು ನಾನು ಬಯಸುತ್ತೇನೆ. ಅಂದರೆ ಮುಹಾಜಿರೀನರು ತಮ್ಮ ಕೆಲಸವನ್ನು ಸ್ವತಂತ್ರವಾಗಿ ಮಾಡಬೇಕು.

ಹಝ್ರತ್ ಪೈಗಂಬರ್(ಸ)ರು ಹೇಳಿದರು: ಸಅದ್! ಏಳು ಆಕಾಶಗಳ ಮೇಲೆ ಅಲ್ಲಾಹನು ಮಾಡಿದ ಅಲ್ಲಾಹನ ನಿರ್ಧಾರದ ಪ್ರಕಾರ ನಿಮ್ಮ ನಿರ್ಧಾರವಾಗಿದೆ.

ಒಂದು ಹದೀಸಿನಲ್ಲಿ ಹಝ್ರತ್ ಪೈಗಂಬರ್(ಸ)ರು ಹಝ್ರತ್ ಸಅದ್(ರ) ಅವರ ನಿರ್ಧಾರದ ಬಗ್ಗೆ ಹೇಳಿದರು. ಇದೇ ನಿರ್ಧಾರದ ಬಗ್ಗೆ ದೇವದೂತರು ನನಗೆ ಸಹ್ರಿಯ ಸಮಯದಲ್ಲಿ ತಿಳಿಸಿದರು.

(ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ-5, ಪುಟ-9-11, ದಾರುಲ್ ಕುತುಬ್ ಇಲ್‌ಮಿಯಾ 1993) (ಶರಹ್ ಅಝ್ಝುರ್ಖಾನಿ ಅಲಲ್ ಮವಾಹಿಬ್, ಸಂಪುಟ-3, ಪುಟ-81, ದಾರುಲ್ ಕುತುಬ್ ಇಲ್‌ಮಿಯಾ 1996)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಅದರ ವಿವರಣೆಯನ್ನು ಈ ಕೆಳಗಿನಂತೆ ಬರೆದಿದ್ದಾರೆ: "ಅಂತಿಮವಾಗಿ, ಸುಮಾರು ಇಪ್ಪತ್ತು ದಿನಗಳ ಮುತ್ತಿಗೆಯ ನಂತರ, ಈ ದುರದೃಷ್ಟಕರ ಯಹೂದಿಗಳು ತಮ್ಮ ಮಿತ್ರನಾಗಿದ್ದರೂ ಅವರ ಬಗ್ಗೆ ಕರುಣೆ ಹೊಂದಿರದ ಒಬ್ಬ ವ್ಯಕ್ತಿಯ ಆಜ್ಞೆಯನ್ನು ಪಾಲಿಸುವ ಮೂಲಕ ತಮ್ಮ ಕೋಟೆಯಿಂದ ಇಳಿಯಲು ಒಪ್ಪಿಕೊಂಡರು. ಅವರು ನ್ಯಾಯ ತೋರ್ಪು ನೀಡುವುದರಲ್ಲಿ ಸಾಕಾರರಾಗಿದ್ದರು, ಆದರೆ ಅವರ ಮನಸ್ಸಿನಲ್ಲಿ ರಹ್ಮತುಲ್ಲಿಲ್ ಆಲಮೀನ್ ಅವರು ಹೊಂದಿದ ಸಹಾನುಭೂತಿ ಮತ್ತು ಕರುಣೆಯನ್ನು ಹೊಂದಿರಲಿಲ್ಲ. ಈ ಸಾರಾಂಶದ ವಿವರಣೆ ಹೀಗಿದೆ: ಔಸ್ ಗೋತ್ರದವರು ಬನೂ ಖುರೈಝಾರ ಹಳೆಯ ಮಿತ್ರರಾಗಿದ್ದರು ಮತ್ತು ಆ ಸಮಯದಲ್ಲಿ ಈ ಗೋತ್ರದ ಮುಖ್ಯಸ್ಥ ಸಅದ್ ಬಿನ್ ಮುಆದ್(ರ) ಆಗಿದ್ದರು ಅವರು ಖಂದಕ್ ಯುದ್ಧದಲ್ಲಿ ಗಾಯಗೊಂಡು ಈಗ ಮಸೀದಿಯ ಅಂಗಳದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು...... ಸಅದ್(ರ) ಕುದುರೆಯ ಮೇಲೆ ಸವಾರರಾಗಿ ಬಂದರು ಮತ್ತು ದಾರಿಯಲ್ಲಿ ಔಸ್ ಗೋತ್ರದ ಕೆಲವು ಜನರು ಅವರಿಗೆ ಒತ್ತಾಯಪೂರ್ವಕವಾಗಿ ವಿನಂತಿಸಿಕೊಂಡಿದ್ದೇನೆಂದರೆ ಖುರೈಝ ಗೋತ್ರ ನಮ್ಮ ಮಿತ್ರ ಗೋತ್ರವಾಗಿದೆ. ಯಾವ ರೀತಿಯಲ್ಲಿ ಖಝ್ರಜ್ ಗೋತ್ರ ತನ್ನ ಮಿತ್ರ ಪಕ್ಷವಾದ ಬನೂ ಖೈನ್‌ಖಾಅ್ ಗೋತ್ರದೊಂದಿಗೆ ಸೌಮ್ಯತೆ ತೋರಿಸಿತೋ ಅದೇ ರೀತಿಯಲ್ಲಿ ನೀವು ಸಹ ಖುರೈಝ ಗೋತ್ರದೊಂದಿಗೆ ರಿಯಾಯಿತಿ ತೋರಿಸಿರಿ ಮತ್ತು ಅವರನ್ನು ಕಠಿಣವಾದ ಶಿಕ್ಷೆಗೆ ಗುರಿಪಡಿಸಬೇಡಿರಿ. ಸಅದ್ ಬಿನ್ ಮುಆಧ್(ರ) ಮೊದಲು ಮೌನವಾಗಿ ಇದ್ದುಕೊಂಡು ಅವರ ಮಾತುಗಳನ್ನು ಆಲಿಸುತ್ತಿದ್ದರು. ಆದರೆ ಅವರು ಇನ್ನಷ್ಟು ಒತ್ತಾಯಪಡಿಸಿದಾಗ ಹೀಗೆ ಹೇಳಿದರು:

"ಇದು ಸತ್ಯ ಮತ್ತು ನ್ಯಾಯದ ವಿಷಯದಲ್ಲಿ ಯಾವನೇ ದೂಷಿಸುವವನ ದೂಷಣೆಯನ್ನು ಸಅದ್ ಪರಿವೆ ಮಾಡದಂತಹ ಸಮಯವಾಗಿದೆ. ಈ ಉತ್ತರವನ್ನು ಆಲಿಸಿ ಜನರು ಸುಮ್ಮನಾದರು."

ಸಅದ್(ರ) ಹಝ್ರತ್ ಪೈಗಂಬರ್(ಸ) ಅವರ ಸಮೀಪ ಬಂದಾಗ, ಹಝ್ರತ್ ಪೈಗಂಬರ್(ಸ)ರು ಸಹಾಬಿಗಳಿಗೆ ಹೇಳಿದರು: **ಖೂಮು ಇಲಾ ಸಯ್ಯಿದಿಕುಮ್**– ಅಂದರೆ "ನಿಮ್ಮ ಸರದಾರರಿಗಾಗಿ ನೀವು ಎದ್ದೇಳಿ ಮತ್ತು ಸವಾರಿಯಿಂದ ಕೆಳಗಿಳಿಯಲು ಅವರಿಗೆ ಸಹಾಯ ಮಾಡಿ." ಸಅದ್(ರ) ಸವಾರಿಯಿಂದ ಕೆಳಗಿಳಿದು ಹಝ್ರತ್ ಪೈಗಂಬರ್(ಸ)ರ ಕಡೆಗೆ ಹೋದಾಗ ಅವರು(ಸ) ಅವರನ್ನು ಉದ್ದೇಶಿಸಿ ಹೇಳಿದರು: "ಸಅದ್! ಬನು ಖುರೈಝಾ ಅವರು ನಿಮ್ಮನ್ನು 'ಹಕಮ್' ತೀರ್ಪುಗಾರರಾಗಿ ಸ್ವೀಕರಿಸಿದ್ದಾರೆ ಮತ್ತು ಅವರ ಬಗ್ಗೆ ನೀವು ತೆಗೆದುಕೊಳ್ಳುವ ಯಾವುದೇ ನಿರ್ಧಾರವನ್ನು ಸ್ವೀಕರಿಸಲಾಗುತ್ತದೆ." ಅದಕ್ಕೆ ಹಝ್ರತ್ ಸಅದ್(ರ) ತಮ್ಮ ಔಸ್ ಗೋತ್ರದ ಜನರತ್ತ ನೋಡಿ ಹೇಳಿದರು. **ಅಲೈಕುಮ್ ಬಿಝಾಲಿಕ ಅಹ್ದುಲ್ಲಾಹಿ ವ ಮೀಸಾಖುಹೂ ಇನ್ನಲ್‌ಹುಕ್ಮ ಫೀಹಿಮ್ ಬಿಮಾ ಹಕಮ್‌ತು**– "ನೀವು ದೇವರನ್ನು ಸರ್ವದರ್ಶಿ ಎಂದು ತಿಳಿದುಕೊಂಡು, ಬನೂ ಖುರೈಝಾರ ಬಗ್ಗೆ ನಾನು ಮಾಡುವ ನಿರ್ಧಾರವನ್ನು ಅನುಸರಿಸಲು ನೀವು ಬದ್ಧರಾಗಿರುತ್ತೀರಿ ಎಂದು ದೃಢವಾದ ಭರವಸೆ ನೀಡುತ್ತೀರಾ?" ಅದಕ್ಕೆ ಜನರು ಹೌದು ನಾವು ವಾಗ್ದಾನ ಮಾಡುತ್ತೇವೆ ಎಂದು ಹೇಳಿದರು. ಆಗ ಸಅದ್(ರ) ಹಝ್ರತ್ ಪೈಗಂಬರ್(ಸ)ರು ತಂಗಿದ್ದ ಕಡೆಗೆ ಸೂಚಿಸಿ ಹೇಳಿದರು. **ವಲಾ ಮನ್ ಹಾಹುನಾ**– ಅಂದರೆ "ಇಲ್ಲಿ ನೆಲೆಸಿರುವ ಆ ಮಹನೀಯರು ಕೂಡ ನನ್ನ ನಿರ್ಧಾರದಂತೆ ನಡೆದುಕೊಳ್ಳಲು ಬದ್ಧರಾಗುತ್ತಾರೆ ಎಂದು ಭರವಸೆ ನೀಡುತ್ತಾರೆಯೇ." ಹಝ್ರತ್ ಪೈಗಂಬರ್(ಸ)ರು ಹೌದು ಎಂದು ಹೇಳಿದರು.

ಈ ಒಪ್ಪಂದದ ನಂತರ, ಸಅದ್(ರ) ತಮ್ಮ ನಿರ್ಧಾರವನ್ನು ನೀಡಿದರು, ಅದು ಹೀಗಿತ್ತು:

"ಬನೂ ಖುರೈಝ಼ ಗೋತ್ರದ ಯೋಧರನ್ನು ವಧಿಸಬೇಕು ಹಾಗೂ ಅವರ ಮಹಿಳೆಯರನ್ನು ಮತ್ತು ಮಕ್ಕಳನ್ನು ಬಂಧಿಸಬೇಕು ಹಾಗೂ ಅವರ ಸಂಪತ್ತುಗಳನ್ನು ಮುಸ್ಲಿಮರಿಗೆ ವಿತರಣೆ ಮಾಡಬೇಕು."

ತೀರ್ಪನ್ನು ಆಲಿಸಿದಾಗ ಹಝ್ರ಼ತ್ ಪೈಗಂಬರ್(ಸ) ತಕ್ಷಣ ಹೀಗೆ ಹೇಳಿದರು: **ಲಖದ್ ಹಕಮ್‌ತ ಬಿಹುಕ್‌ಮಿಲ್ಲಾಹಿ**. ಎಂದರೆ ನಿಮ್ಮ ಈ ತೀರ್ಪು ದೈವಿಕ ವಿಧಿಯಾಗಿದೆ. ಇದನ್ನು ತಪ್ಪಿಸಲು ಸಾಧ್ಯವಿಲ್ಲ, ಮತ್ತು ಹಝ್ರ಼ತ್ ಪೈಗಂಬರ್(ಸ)ರ ಈ ಮಾತುಗಳ ತಾತ್ಪರ್ಯವೇನೆಂದರೆ, ಬನೂ ಖುರೈಝ಼ರ ಕುರಿತು ಈ ತೀರ್ಪಿನಲ್ಲಿ ಸ್ಪಷ್ಟವಾಗಿ ದೈವಿಕ ಕೈ ಇದೆ ಎಂದು ಕಾಣಬಹುದಾಗಿದೆ; ಆದ್ದರಿಂದ ಹಝ್ರ಼ತ್ ಪೈಗಂಬರ್(ಸ)ರ ಕಾರುಣ್ಯದ ಗುಣ ಈ ವಿಧಿಯನ್ನು ತಡೆಯಲು ಸಾಧ್ಯವಿರಲಿಲ್ಲ. ಮತ್ತು ಅದು ನಿಜವಾಗಿಯೂ ಸರಿಯಾಗಿತ್ತು ಏಕೆಂದರೆ ಬನೂ ಖುರೈಝಾದವರು ಅಬುಲುಬಾಬಾನನ್ನು ಅವನ ಸಲಹೆಗಾಗಿ ಕರೆದಿದ್ದರು ಮತ್ತು ಅಬುಲುಬಾಬಾರ ಬಾಯಿಂದ ಒಂದು ವಿಷಯ ಹೊರಬಂದಿತು, ಅದು ಸಂಪೂರ್ಣವಾಗಿ ಆಧಾರರಹಿತವಾಗಿತ್ತು ಮತ್ತು ನಂತರ ಬನೂ ಖುರೈಝಾ ಅವರು ಹಝ್ರತ್ ಪೈಗಂಬರ್(ಸ)ರ 'ಹಕಮ್' ತೀರ್ಪುಗಾರ ಎಂದು ಸ್ವೀಕರಿಸಲು ನಿರಾಕರಿಸುವುದು ಮತ್ತು ಔಸ್ ಗೋತ್ರದ ಜನರು ನಮ್ಮ ಮಿತ್ರರು ಎಂದು ಕಲ್ಪಿಸಿಕೊಳ್ಳುವುದು ಮತ್ತು ನಮ್ಮೊಂದಿಗೆ ರಿಯಾಯಿತಿ ಮಾಡುತ್ತಾರೆ ಎಂದು ಔಸ್ ಗೋತ್ರದ ಸರದಾರರಾದ ಹಝ್ರತ್ ಸಅದ್ ಬಿನ್ ಮುಆದ್(ರ) ಅವರನ್ನು ತಮ್ಮ ತೀರ್ಪುಗಾರರಾಗಿ ನೇಮಿಸಿಕೊಳ್ಳುವುದು. ಮತ್ತೆ ಸಅದ್(ರ)ರು ಸರಿಯಾದ ಮತ್ತು ನ್ಯಾಯಯುತವಾದ ಮಾರ್ಗಯಲ್ಲಿ ಸ್ವಜನಪಕ್ಷಪಾತದ ಭಾವನೆಯನ್ನು ಮನಸ್ಸಿನಿಂದ ಸಂಪೂರ್ಣವಾಗಿ ಕಣ್ಮರೆಯಾಗಿರಿವುದು. ಮತ್ತು ಅಂತಿಮವಾಗಿ, ತನ್ನ ನಿರ್ಧಾರವನ್ನು ಪ್ರಕಟಿಸುವ ಮೊದಲು, ಸಅದ್(ರ) ಅವರು ಈ ನಿರ್ಧಾರದ ಪ್ರಕಾರ ಕಾರ್ಯನಿರ್ವಹಿಸುವುದಾಗಿ ಹಝ್ರತ್ ಪೈಗಂಬರ್(ಸ) ಅವರಿಂದ ದೃಢವಾದ ವಾಗ್ದಾನವನ್ನು ಪಡೆಯುವುದು. ಈ ಎಲ್ಲಾ ವಿಷಯಗಳು ಕಾಕತಾಳೀಯವಾಗಿರಲು ಸಾಧ್ಯವಿಲ್ಲ ಮತ್ತು ನಿಸ್ಸಂಶಯವಾಗಿ, ಅದರ ಅಡಿಯಲ್ಲಿ, ದೈವಿಕ ವಿಧಿಯು ತನ್ನ ಕೆಲಸವನ್ನು ಮಾಡುತ್ತಿದೆ ಮತ್ತು ಈ ನಿರ್ಧಾರವು ದೇವರದ್ದಾಗಿತ್ತು ಸಅದ್ ಅವರದ್ದಾಗಿರಲಿಲ್ಲ.

(ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–599–601)

ಸಅದ್ ಬಿನ್ ಮುಆದ್(ರ) ಅವರ ನಿರ್ಧಾರದ ಅನುಷ್ಠಾನದ ಬಗ್ಗೆ ಮುಂದೆ ಬರೆಯಲಾಗಿದೆ, ಹಝ್ರ಼ತ್ ಸಅದ್(ರ)ರ ತೀರ್ಪಿನ ನಂತರ ಹಝ್ರ಼ತ್ ಪೈಗಂಬರ್(ಸ) ಧ಼ುಲ್‌ಹಜ್ಜ ಒಂಬತ್ತರಲ್ಲಿ ಮತ್ತೊಂದು ವರದಿಯ ಪ್ರಕಾರ ಧ಼ುಲ್‌ಹಜ್ಜ ಏಳರಲ್ಲಿ ಗುರುವಾರದಂದು ಮದೀನಕ್ಕೆ ಮರಳಿ ಹೋದರು. ಹಝ್ರ಼ತ್ ಪೈಗಂಬರ್(ಸ)ರ ಆದೇಶ ಪ್ರಕಾರ ಕೈದಿಗಳನ್ನು ಮದೀನದಲ್ಲಿ ಹಝ್ರ಼ತ್ ಉಸಾಮ ಬಿನ್ ಝೈದ್(ರ)ರ ಮನೆಗೆ ಹಾಗೂ ಮಹಿಳೆಯರನ್ನು ಮತ್ತು ಮಕ್ಕಳನ್ನು ಹಝ್ರ಼ತ್ ರಮ್ಲ ಬಿನ್ತ್ ಹಾರಿಸ್(ರ)ರ ಮನೆಗೆ ತರಲಾಯಿತು. ಮತ್ತು ಹಝ್ರತ್ ಪೈಗಂಬರ್(ಸ) ಅವರು ಅವರಿಗೆ ತಿನ್ನಲು ಖರ್ಜೂರಗಳನ್ನು ತರಲು ಆದೇಶಿಸಿದರು, ಆದ್ದರಿಂದ ಅದನ್ನು ಭೂಮಿಯ ಮೇಲೆ ಹರಡಿಸಲಾಯಿತು. ಜನರು ಅನೇಕ ಖರ್ಜೂರಗಳನ್ನು ತಂದರು ಮತ್ತು ಯಹೂದಿಗಳು ರಾತ್ರಿಯಿಡೀ ಅವುಗಳನ್ನು ತಿನ್ನುತ್ತಿದ್ದರು. ಆಯುಧಗಳು, ಸರಕುಗಳು, ಬಟ್ಟೆಗಳು ಇತ್ಯಾದಿಗಳನ್ನು ಹಝ್ರತ್ ರಮ್ಲಾ(ರ) ಅವರ ಮನೆಗೆ ತರಲು ಆದೇಶಿಸಲಾಯಿತು ಮತ್ತು ಒಂಟೆಗಳು ಮತ್ತು ಮೇಕೆಗಳನ್ನು ಮರಗಳ ಕೆಳಗೆ ಮೇಯಲು ಬಿಡಲಾಯಿತು. (ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ–5, ಪುಟ–11,12, ದಾರುಲ್ ಕುತುಬ್ ಇಲ್‌ಮಿಯಾ 1993) (ಅತ್ತಬಖಾತುಲ್ ಕುಬ್ರ, ಸಂಪುಟ–2, ಪುಟ–58, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಹೇಳಿದರು, "ಬನು ಖುರೈಝಾ ಅವರ ದಂಗೆ, ವಿಶ್ವಾಸಘಾತುಕತನ, ದಂಗೆ, ದ್ರೋಹ, ಪ್ರಲೋಬನೆ, ಕೊಲೆ ಮತ್ತು ರಕ್ತಪಾತದಿಂದಾಗಿ, ಅವರ ಯೋಧರನ್ನು ಪ್ರಪಂಚದಿಂದ ಅಳಿಸಿಹಾಕಲು ದೈವಿಕ ನ್ಯಾಯಾಲಯವು ನಿರ್ಧಾರವನ್ನು ಹೊರಡಿಸಿದ್ದಂತೆ ತೋರುತ್ತದೆ. ಆದ್ದರಿಂದ, ಹಝ್ರತ್ ಪೈಗಂಬರ್(ಸ)ರು ಆರಂಭದಲ್ಲಿ ಈ ಯುದ್ಧದ ಬಗ್ಗೆ ಅದೃಶ್ಯ ಸ್ಫೂರ್ತಿಯನ್ನು ಹೊಂದಿದ್ದರು ಎಂಬ ಅಂಶವು ದೈವಿಕ ವಿಧಿಯಾಗಿತ್ತು ಎಂದು ತೋರಿಸುತ್ತದೆ, ಆದರೆ ಅಲ್ಲಾಹನು ತನ್ನ ಸಂದೇಶವಾಹಕರ ಮೂಲಕ ಹೊರಡಿಸಿದ ಈ ನಿರ್ಧಾರವನ್ನು ಅನುಮೋದಿಸಲಿಲ್ಲ. ಆದ್ದರಿಂದ ಅಲ್ಲಾಹನು ಕ್ರಮೇಣ ಹಝ್ರತ್ ಪೈಗಂಬರ್(ಸ) ಅವರನ್ನು ಅದೃಶ್ಯ ಸ್ವಭಾವಗಳಿಂದ ಸಂಪೂರ್ಣವಾಗಿ ಪ್ರತ್ಯೇಕಿಸಿದನು ಮತ್ತು ಈ ನಿರ್ಧಾರವನ್ನು ಸಅದ್ ಬಿನ್ ಮುಆದ್(ರ) ಅವರು ಘೋಷಿಸಿದರು ಮತ್ತು ನಿರ್ಧಾರವು ಎಂತಹ ರೀತಿಯಲ್ಲಿ ಮಾಡಿಸಿದನು ಎಂದರೆ ಹಝ್ರತ್ ಪೈಗಂಬರ್(ಸ)ರು ವಾಗ್ದಾನ ಮಾಡಿದ್ದರಿಂದ ಯಾವುದೇ ಹಸ್ತಕ್ಷೇಪ ಮಾಡಲು ಅವರಿಗೆ ಸಾಧ್ಯವಾಗಲಿಲ್ಲ. ಸಅದ್ ಬಿನ್ ಮುಆದ್(ರ) ತೆಗೆದುಕೊಳ್ಳುವ ಈ ನಿರ್ಧಾರಕ್ಕೆ ಹಝ್ರತ್ ಪೈಗಂಬರ್(ಸ)ರು ಇನ್ನೂ ಬದ್ಧರಾಗಿರುತ್ತೀರಿ ಎಂದು ಹೇಳಿದ್ದರು. ಹಝ್ರ಼ತ್ ಪೈಗಂಬರ್(ಸ) ಬನೂ ಖುರೈಝ಼ ಗೋತ್ರದ ಮೇಲೆ ದೌರ್ಜನ್ಯ ಮಾಡಿರುವರು ಎಂಬುದಾಗಿ ಹಝ್ರ಼ತ್ ಸಅದ್(ರ)ರ ತೀರ್ಪಿನ ಬಗ್ಗೆ ಅನ್ಯರು ಮತ್ತು ಆಕ್ಷೇಪ ಮಾಡುವ ಕೆಲವು ಜನರು ನಮ್ಮ ಯುವಕರ ಮನಸ್ಸುಗಳಿಗೆ ವಿಷ ತುಂಬಿಸುತ್ತಾರೆ. ಇದರ ಬಗ್ಗೆ ಒಂದು ಸ್ಪಷ್ಟವಾದ ಉತ್ತರವೇನೆಂದರೆ, ಈ ತೀರ್ಪನ್ನು ಹಝ್ರ಼ತ್ ಪೈಗಂಬರ್(ಸ) ಸ್ವತಃ ಮಾಡಿರಲಿಲ್ಲ. ಬದಲಾಗಿ ಅಲ್ಲಾಹನು ಈ ತೀರ್ಪನ್ನು ಅವರ ಮಿತ್ರ ಪಕ್ಷದ ಮೂಲಕ ಮಾಡಿಸಿದನು. ಅದರಲ್ಲೂ (ತೀರ್ಪನ್ನು ಸ್ವೀಕರಿಸುವುದಾಗಿ ಮುಂಚಿತವಾಗಿಯೇ) ಹಝ್ರ಼ತ್ ಪೈಗಂಬರ್(ಸ)ರಿಂದ ಸುದೃಢವಾದ ವಾಗ್ದಾನ ಪಡೆಯಲಾಗಿತ್ತು.

ಆದಾಗ್ಯೂ, ಈ ನಿರ್ಧಾರದ ಪರಿಣಾಮವು ನಿಮ್ಮ ಮೇಲೆ ಮಾತ್ರವಲ್ಲ, ಎಲ್ಲಾ ಮುಸ್ಲಿಮರ ಮೇಲೂ ಆಗಿರುವುದರಿಂದ, ಕರುಣೆ ಮತ್ತು ಕ್ಷಮೆಯಾಚನೆಯ ಕಡೆಗೆ ಒಲವು ತೋರಿದರೂ ನೀವು(ಸ) ನಿಮ್ಮ ಅಭಿಪ್ರಾಯದ ಆಧಾರದ ಮೇಲೆ ಈ ನಿರ್ಧಾರವನ್ನು ಬದಲಾಯಿಸುವುದು ನಿಮ್ಮ ಹಕ್ಕು ಎಂದು ನೀವು ಭಾವಿಸಲಿಲ್ಲ. ಇದು ದೈವಿಕ ಸ್ವಭಾವವಾಗಿದೆ, ಅದರ ಶಕ್ತಿಯಿಂದ ಪ್ರಭಾವಿತವಾದ ಪದಗಳು ನಿಮ್ಮ ಬಾಯಿಯಿಂದ ಅನೈಚ್ಛಿಕವಾಗಿ ಹೀಗೆ ಹೊರಬಂದವು: **ಖದ್ ಹಕಮ್‌ತ ಬಿಹುಕ್ಮಿಲ್ಲಾಹಿ**– ಅಂದರೆ: "ಓ ಸಅದ್! ನಿಮ್ಮ ಈ ನಿರ್ಧಾರವು ಅಲ್ಲಾಹನ ವಿಧಿಯ ಪ್ರಕಾರವಾಗಿದೆ." ಅದನ್ನು ಬದಲಾಯಿಸುವ ಶಕ್ತಿ ಯಾರಿಗೂ ಇಲ್ಲ.

ಈ ಮಾತುಗಳನ್ನು ಹೇಳುತ್ತಾ, ಅವರು(ಸ) ಮೌನವಾಗಿ ಅಲ್ಲಿಂದ ಎದ್ದು ನಗರದ ಕಡೆಗೆ ಹೀದರು ಮತ್ತು ಆ ಕ್ಷಣದಲ್ಲಿ ಅವರ ಮನಸ್ಸು ಒಂದು ಸಮುದಾಯವು ಈಮಾನ್ (ವಿಶ್ವಾಸ ಹೊಂದಲು) ಬಹಳ ಆಸೆಯನ್ನು ಹೊಂದಿದ್ದು, ಅವರ ಅಧರ್ಮದಿಂದ ವರ್ತಿಸಿ ಶಿಕ್ಷೆಗೆ ಗುರಿಯಾಗುತ್ತಿದ್ದಾರೆ ಎಂದು ದುಃಖಿತರಾದರು. ಮತ್ತು ಬಹುಶಃ ಈ ಸಂದರ್ಭದಲ್ಲಿ ಹಝ್ರ಼ತ್ ಪೈಗಂಬರ್(ಸ) ಬಹಳ ದುಃಖದಿಂದ ಹೀಗೆ ಹೇಳಿದರು: **ಲೌ ಆಮನ ಬೀ ಅಶರತುನ್ ಮಿನಲ್ ಯಹೂದಿ ಲಆಮನತ್ ಬಿಯಲ್ ಯಹೂದು**. ಎಂದರೆ ಯಹೂದಿಯರಲ್ಲಿ ಪ್ರಮುಖರಾದ ಹತ್ತು ಜನರು (ಅಂದರೆ ಹತ್ತು ಆದರಣೀಯ ವ್ಯಕ್ತಿಗಳು ವಿಶ್ವಾಸ ಹೊಂದುತ್ತಿದ್ದರೆ) ನನ್ನಲ್ಲಿ ವಿಶ್ವಾಸ ಹೊಂದುತ್ತಿದ್ದರೆ, ಯಹೂದಿಯರ ಈ ಪೂರ್ತಿ ಸಮುದಾಯ ನನ್ನಲ್ಲಿ ವಿಶ್ವಾಸ ಹೊಂದುತ್ತಿದ್ದರು ಹಾಗೂ ದೈವಿಕ ಶಿಕ್ಷೆಯಿಂದ ಪಾರಾಗುತ್ತಿದ್ದರು ಎಂಬ ಪ್ರತೀಕ್ಷೆಯನ್ನು ನಾನು ಅಲ್ಲಾಹನಲ್ಲಿ ಇರಿಸುತ್ತಿದ್ದೆ. ಅಲ್ಲಿಂದ ಎದ್ದೇಳುತ್ತಾ ಹಝ್ರತ್ ಪೈಗಂಬರ್(ಸ)ರು ಬನೂ ಖುರೈಝಾದ ಪುರುಷರು, ಮಹಿಳೆಯರು ಮತ್ತು ಮಕ್ಕಳನ್ನು ಪ್ರತ್ಯೇಕಿಸಬೇಕೆಂದು ಆದೇಶಿಸಿದರು. ಆದ್ದರಿಂದ ಎರಡು ಗುಂಪುಗಳನ್ನು ಪ್ರತ್ಯೇಕಿಸಿ ಮದೀನಾಗೆ ಕರೆತಂದರು ಮತ್ತು ನಗರದಲ್ಲಿ ಎರಡು ಪ್ರತ್ಯೇಕ ಮನೆಗಳಲ್ಲಿ

ಒಟ್ಟುಗೂಡಿಸಿದರು ಮತ್ತು ಹಝ್ರತ್ ಪೈಗಂಬರ್(ಸ) ರವರ ನೇತೃತ್ವದಲ್ಲಿ, ಸಹಾಬಗಳು (ಅವರಲ್ಲಿ ಅನೇಕರು ಸ್ವತಃ ಹಸಿವಿನಿಂದ ಬಳಲುತ್ತಿದ್ದರು) ಬನೂ ಖುರೈಝಾ ಅವರಿಗೆ ತಿನ್ನಲು ರಾಶಿಗಟ್ಟಲೆ ಹಣ್ಣುಗಳನ್ನು ತಂದರು ಮತ್ತು ಈ ಯಹೂದಿಗಳು ರಾತ್ರಿಯಿಡೀ ಹಣ್ಣುಗಳನ್ನು ತಿನ್ನುವುದರಲ್ಲಿ ನಿರತರಾಗಿದ್ದರು ಎಂದು ಬರೆಯಲಾಗಿದೆ. (ಸೀರ'ತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ-601 ರಿಂದ 602)

ಬೆಳಿಗ್ಗಿನ ಸಮಯ ಮದೀನಾದ ಮಾರುಕಟ್ಟೆಯಲ್ಲಿ ಗುಂಡಿಗಳನ್ನು ಅಗೆಯಲು ಆದೇಶಿಸಿದರು, ಅದನ್ನು ಅಬು ಜಹಮ್ ಅದ್ವಿ ಅವರ ಮನೆಯಾದ ಅಹ್ಜಾರುಝ್ಝೈದ್‌ವರೆಗೆ ಅಗೆಯಲಾಯಿತು. ನಂತರ ಹಝ್ರತ್ ಪೈಗಂಬರ್(ಸ) ಅವರು ಆಗಮಿಸಿದರು ಮತ್ತು ಅವರೊಂದಿಗೆ ಇತರ ಕೆಲವು ಸಹಾಬಗಳು ಇದ್ದರು. ಅವರು(ಸ) ಬನೂ ಖುರೈಝಾರ ಪುರುಷರನ್ನು ಕರೆಸಿ ಅವರನ್ನು ಗುಂಪುಗಳಾಗಿ ಹೊರಗೆ ಕರೆದುಕೊಂಡು ಹೋಗಿ ಈ ಕಂದಕದಲ್ಲಿ ವಧಿಸಲಾಗುತ್ತಿತ್ತು. ಅವರನ್ನು ಕರೆದೊಯ್ಯುವಾಗ, ಅವರು ಕಅಬ್ ಬಿನ್ ಅಸದ್‌ಗೆ ಹೇಳಿದರು, ಹಝ್ರತ್ ಪೈಗಂಬರ್(ಸ) ಅವರು ಏನು ಮಾಡುತ್ತಿದ್ದಾರೆಂದು ನೀವು ಯೋಚಿಸುತ್ತೀರಿ? ಯಾರೋ ಅವರನ್ನು ಕೇಳಿದರು. ಅದಕ್ಕೆ ಅವನು ಹೇಳಿದನು ನಿನಗೆ ಏನು ಇಷ್ಟವೋ ಅದನ್ನು ಮಾಡುತ್ತಿದ್ದಾರೆ. ಜನರು ಕಅಬ್ ಬಿನ್ ಅಸದ್‌ಗೆ ಹೇಳಿದರು: ಮುಹಮ್ಮದ್(ಸ) ಏನು ಮಾಡಲು ಪ್ರಾರಂಭಿಸಿದ್ದಾರೆ ಎಂಬುದರ ಬಗ್ಗೆ ನಿಮ್ಮ ಅಭಿಪ್ರಾಯವೇನು? ನಿನಗೆ ಏನು ಇಷ್ಟವೋ ಅದನ್ನು ಮಾಡಲು ಹೊರಟಿದ್ದಾರೆ, ಅವರು ನಿಮಗೆ ಇಷ್ಟವಿಲ್ಲದ ಕೆಲಸವನ್ನು ಮಾಡಲು ಹೊರಟಿದ್ದಾರೆ ಎಂದು ಹೇಳಿದನು. ಸಾವು ನಿನ್ನ ಮೇಲಿರಲಿ. ಯಾವುದೇ ಸಂದರ್ಭದಲ್ಲೂ ನಿನಗೆ ಅರ್ಥವಾಗುವುದಿಲ್ಲ. ಕರೆ ಮಾಡಿದವನು ಬಿಡುವುದಿಲ್ಲ ಮತ್ತು ಹೋದವರು ಹಿಂತಿರುಗುವುದಿಲ್ಲ. ಅವನಿಗಾಗಿ ಅಲ್ಲಾಹನ ಆಣೆ! ಖಡ್ಗ ಮಾತ್ರವಿದೆ. ಅಂದರೆ, ಈಗ ನಿಮ್ಮ ಜೀವನ ಉಳಿಯಲು ಯಾವ ಸಾಧ್ಯತೆಯು ಇಲ್ಲ. ನಾನು ನಿನ್ನನ್ನು ಬೇರೆ ಕಡೆಗೆ ಕರೆದಿದ್ದೆ ಆದರೆ ನೀನು ತಿರಸ್ಕರಿಸಿದೆ. ಅದಕ್ಕೆ ಯಹೂದಿಯರು ಇದು ಕೋಪದ ಸಮಯವಲ್ಲ ಎಂದು ಹೇಳಿದರು. ನಿನ್ನ ಅಭಿಪ್ರಾಯವನ್ನು ನಾವು ಒಪ್ಪಿಕೊಂಡಿದ್ದರೆ, ನಮ್ಮ ಮತ್ತು ಅಲ್ಲಾಹನ ಸಂದೇಶವಾಹಕರಾದ ಮುಹಮ್ಮದ್(ಸ) ಅವರ ನಡುವೆ ಇದ್ದ ಒಪ್ಪಂದವನ್ನು ಉಲ್ಲಂಘಿಸಿದ ತಪ್ಪಿತಸ್ಥರಾಗುತ್ತಿರಲಿಲ್ಲ. ಹಯ್ಯ್ ಬಿನ್ ಅಖ್ತಬ್ ಹೇಳಿದನು, ಈಗ ಈ ಆರೋಪವನ್ನು ಬಿಡಿ. ಈಗ ನಿಮ್ಮಿಂದ ಏನನ್ನೂ ತೆಗೆದುಕೊಳ್ಳಲಾಗುವುದಿಲ್ಲ. ಈಗ ಕತ್ತಿಗಾಗಿ ಕಾಯಿರಿ. ಯಹೂದಿಗಳನ್ನು ವಧಿಸಲು ಹಝ್ರತ್ ಅಲಿ(ರ) ಮತ್ತು ಹಝ್ರತ್ ಝುಬೈರ್ ಬಿನ್ ಅವಾಮ್(ರ) ಅವರನ್ನು ನಿಯೋಜಿಸಲಾಯಿತು. ಕೆಲವು ವರದಿಗಳ ಪ್ರಕಾರ, ಕೆಲವು ಕೈದಿಗಳನ್ನು ಕೊಲ್ಲಲು ವಿವಿಧ ಸಹಾಬಿಗಳ ನಡುವೆ ವಿಂಗಡಿಸಲಾಗಿತ್ತು. (ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ-5, ಪುಟ-12, ದಾರುಲ್ ಕುತುಬ್ ಇಲ್‌ಮಿಯಾ 1993)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅದರ ವಿವರಣೆಯನ್ನು ಈ ಕೆಳಗಿನಂತೆ ಬರೆದಿದ್ದಾರೆ: ಮರುದಿನ ಬೆಳಿಗ್ಗೆ ಹಝ್ರತ್ ಸಅದ್ ಬಿನ್ ಮುಆಧ್(ರ)ರ ತೀರ್ಪು ಜಾರಿಯಾಗಬೇಕಿತ್ತು. ತೀರ್ಪು ಜಾರಿಯಾಗುವ ವೇಳೆ ಯಾವುದಾದರೂ ನಿರ್ದೇಶನದ ಅವಶ್ಯಕತೆ ಬರುವುದಾದರೆ ತಡಮಾಡದೇ ನಿರ್ದೇಶನ ನೀಡುವ ಉದ್ದೇಶದಿಂದ ಹಝ್ರತ್ ಪೈಗಂಬರ್(ಸ) ಸ್ವತಃ ಸಮೀಪದಲ್ಲೇ ಒಂದು ಜಾಗದಲ್ಲಿ ಕುಳಿತುಕೊಂಡಿದ್ದರು. ನ್ಯಾಯಾಲಯದ ದೃಷ್ಟಿಯಲ್ಲಿ ಹಝ್ರತ್ ಸಅದ್(ರ)ರ ತೀರ್ಪಿಗೆ ಮೇಲ್ಮನವಿ ಎಂಬಂತೆ ಹಝ್ರತ್ ಪೈಗಂಬರ್(ಸ)ರ ಮುಂದೆ ಇರಿಸಲು ಸಾಧ್ಯವಿರಲಿಲ್ಲ. ಆದರೆ ಒಬ್ಬ ಅರಸ ಅಥವಾ ರಾಜ್ಯದ ಪ್ರಧಾನಿ ಎಂಬ ನಿಟ್ಟಿನಲ್ಲಿ ಯಾವನಾದರೂ ವ್ಯಕ್ತಿಯ ಕುರಿತು ಯಾವುದಾದರೂ ವಿಶಿಷ್ಟ ಕಾರಣದಿಂದ ದಯೆದೋರಿಸಬೇಕು ಎಂದು ಮಾಡುವ ಮನವಿಯನ್ನು ಹಝ್ರತ್ ಪೈಗಂಬರ್(ಸ) ಆಲಿಸಬಹುದಾಗಿತ್ತು. ಅಪರಾಧಿಗಳನ್ನು ಒಬ್ಬೊಬ್ಬರನ್ನಾಗಿ ವಧಿಸಲು ಎಂದರೆ, ಒಬ್ಬನನ್ನು ವಧಿಸುವಾಗ ಮತ್ತೊಬ್ಬನು ಸಮೀಪ ಇಲ್ಲದ ರೀತಿಯಲ್ಲಿ ವಧಿಸಲು ಹಝ್ರತ್ ಪೈಗಂಬರ್(ಸ) ತನ್ನ ಕಾರುಣ್ಯದ ಕಾರಣದಿಂದ ಆದೇಶ ನೀಡಿದರು.

ಬನೂ ನಝೀರಿನ ಮುಖಂಡ ಹುಯ್ಯ್ ಬಿನ್ ಅಖ್ತಬ್‌ನ ಸರದಿ ಬಂದಾಗ ಆತ ಹಝ್ರತ್ ಪೈಗಂಬರ್(ಸ)ರನ್ನು ನೋಡಿ ಹೀಗೆ ಹೇಳಿದನು: ಹೇ ಮುಹಮ್ಮದ್, (ಸಲ್ಲಲ್ಲಾಹು ಅಲೈಹಿ ವಸಲ್ಲಂ) ನಿಮ್ಮನ್ನು ಏಕೆ ವಿರೋಧಿಸಿದೆ ಎಂಬುದರ ಬಗ್ಗೆ ನನಗೆ ದುಃಖವಿಲ್ಲ. ಆದರೆ ಸಂಗತಿ ಏನೆಂದರೆ, ಯಾರು ದೇವನನ್ನು ಉಪೇಕ್ಷಿಸುತ್ತಾನೋ ಆತನನ್ನು ದೇವನು ಕೂಡ ಉಪೇಕ್ಷಿಸುತ್ತಾನೆ. ಇದು ಅವನದೇ ಆದೇಶ ಮತ್ತು ವಿಧಿಯಾಗಿದೆ ಎಂದು ಹೇಳಿದನು.

ಅದೇ ರೀತಿಯಲ್ಲಿ ಖುರೈಝುದ ನೇತಾರ ಕಅ್‌ಬ್ ಬಿನ್ ಅಸದ್‌ನನ್ನು ತರಲಾದಾಗ ಹಝ್ರತ್ ಪೈಗಂಬರ್(ಸ) ಸೂಚನೆ ರೂಪದಲ್ಲಿ ಆತನೊಡನೆ ಮುಸ್ಲಿಮನಾಗಲು ಮನವಿ ಮಾಡಿದರು. ಆತನು ಹೇಳಿದನು: "ಹೇ ಅಬುಲ್‌ಖಾಸಿಮ್, ನಾನು ಮುಸ್ಲಿಮನಾಗುತ್ತಿದ್ದೆ. ಆದರೆ ಮರಣಕ್ಕೆ ಹೆದರಿ ಹಾಗೆ ಮಾಡಿದ್ದೇನೆ ಎಂದು ಜನರು ಹೇಳುವರು. ಆದ್ದರಿಂದ ನನ್ನನ್ನು ಯಹೂದಿ ಧರ್ಮದಲ್ಲೇ ಮೃತನಾಗಲು ಬಿಡು."

ರುಫಾ'ಅ ಎಂಬ ಯಹೂದಿಯ ಕ್ಷಮೆಯ ಉಲ್ಲೇಖವೂ ಇದೆ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಅವರು ಅದರ ಬಗ್ಗೆ ಹೀಗೆ ಬರೆದಿದ್ದಾರೆ: "ಮತ್ತೊಬ್ಬ ಯಹೂದಿ ರುಫಾ'ಅ ಎಂಬವನು. ಅವನು ಓರ್ವ ಸಹೃದಯಿ ಮುಸ್ಲಿಮ್ ಮಹಿಳೆಯನ್ನು ಸಿಫಾರಿಷ್ ಮಾಡುವಂತೆ ಮನಃವೊಲಿಸಿ ತನ್ನ ಪರವಾಗಿ ನಿಲ್ಲಿಸಿದನು. ಮತ್ತು ಹಝ್ರತ್ ಪೈಗಂಬರ್(ಸ) ಅವರು ಆ ಮುಸ್ಲಿಮ್ ಮಹಿಳೆಯ ಸಿಫಾರಿಷಿನ ಮೇರೆಗೆ ಕ್ಷಮಿಸಿದರು. ಆದುದರಿಂದ ಆ ಸಮಯದಲ್ಲಿ ಯಾರು ತಮ್ಮ ಸಿಫಾರಿಷ್ ಅನ್ನು ಹಝ್ರತ್ ಪೈಗಂಬರ್(ಸ)ರ ಬಳಿ ಮಾಡಿದ್ದರೂ ಕೂಡಲೆ ಆತನನ್ನು ಅವರು ಮನ್ನಿಸಿದ್ದು ಸಅದ್(ರ) ಅವರ ನಿರ್ಧಾರದಿಂದ ಬಲವಂತಕ್ಕೆ ಒಳಗಾಗಿದ್ದರು ಎಂಬುದಕ್ಕೆ ಪುರಾವೆಯಾಗಿದೆ ಇಲ್ಲದಿದ್ದರೆ ನಿಮ್ಮ(ಸ) ಓಲವು ಅವರನ್ನು ವಧಿಸುವುದಾಗಿ ಇರಲಿಲ್ಲ. (ಸೀರ'ತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ), ಪುಟ-602)

ಹಝ್ರತ್ ಪೈಗಂಬರ್(ಸ) ಅವರು ಅನ್ಯಾಯ ಮಾಡಿದ್ದೀರಿ ಎಂಬ ಆರೋಪಕ್ಕೆ ಇದು ಸ್ಪಷ್ಟವಾದ ಉತ್ತರವಾಗಿದೆ. ಇದು ಅದೇ ರೀತಿ ಮುಂದುವರೆಯಿತು, ಅಂದರೆ: ಹಝ್ರತ್ ಪೈಗಂಬರ್(ಸ)ರು ಅವರನ್ನು ತೊಡೆದುಹಾಕುವವರೆಗೂ ಬನು ಖುರೈಝಾ ಅವರ ಪುರುಷರು ಕೊಲ್ಲಲ್ಪಡುವುದನ್ನು ಮುಂದುವರೆಸಿದರು ಮತ್ತು ಅವರನ್ನು ಸೂರ್ಯಾಸ್ತ ಕಣ್ಮರೆಯಾಗುವವರೆಗೂ ಅವರು ಕೊಲ್ಲಲ್ಪಡುತಿದ್ದರು. ನಂತರ ಹೊಂಡಗಳಿಗೆ ಮಣ್ಣು ತುಂಬಲಾಯಿತು. ಇದೆಲ್ಲವೂ ಹಝ್ರತ್ ಸಅದ್ ಬಿನ್ ಮುಆದ್(ರ) ಅವರ ಕಣ್ಣೆದುರೇ ನಡೆಯಿತು. ಅಲ್ಲಾಹನು ಅವರ ಪ್ರಾರ್ಥನೆಯನ್ನು ಸ್ವೀಕರಿಸಿದನು ಮತ್ತು ಅವರ ಕಣ್ಣುಗಳು ತಂಪಾದವು.

(ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ-5, ಪುಟ-13, ದಾರುಲ್ ಕುತುಬ್ ಇಲ್‌ಮಿಯಾ 1993)

ಐತಿಹಾಸಿಕ ವರದಿಗಳ ಪ್ರಕಾರ, ಮಹಿಳೆಯರಲ್ಲಿ, ಬನು ಖುರೈಝಾದ ಹಕಮ್‌ನ ಪತ್ನಿ ನುಬತಾಹ್ ಮಾತ್ರ ಕೊಲ್ಲಲ್ಪಟ್ಟಳು ಮತ್ತು ಅವಳು ಬನೂ ಖುರೈಝಾ ಅವರ ಕೋಟೆಯ ಗೋಡೆಯ ಬಳಿ ಕುಳಿತಿದ್ದ ಮುಸ್ಲಿಂ ಸಹಾಬಿಯಾ ಹಝ್ರತ್ ಖಲ್ಲಾದ್(ರ) ಅವರನ್ನು ಮೇಲಿನಿಂದ ಕಲ್ಲನ್ನು ಎಸೆದು ಕೊಂದಿದ್ದಳು. ಈ ಕೊಲೆಗೆ ಶಿಕ್ಷೆಯಾಗಿ ಅವಳನ್ನು ಗಲ್ಲಿಗೇರಿಸಲಾಯಿತು. (ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ-5, ಪುಟ-13, 14, ದಾರುಲ್ ಕುತುಬ್ ಇಲ್‌ಮಿಯಾ 1993) ಆದರೆ ಕೆಲವು ಜೀವನಚರಿತ್ರೆಕಾರರು ಈ ವರದಿಯನ್ನು ಒಪ್ಪುವುದಿಲ್ಲ ಮತ್ತು ಅವರ ಪ್ರಕಾರ, ಬನೂ ನಝೀರ್‌ನ ಅಥವಾ ಖೈಬರ್‌ನ ಕೆಲವು ವರದಿಗಳು ಈ ಘಟನೆಯೊಂದಿಗೆ ಬೆರೆತಿರುವ ಕಾರಣದಿಂದ ಮತ್ತು ಕೆಲಚು ಇತರೆ ಸಂಬಂಧದ ಕಾರಣದಿಂದ ಆ ಮಹಿಳೆಯ ಕೊಲೆಯ ಘಟನೆಯು ಸರಿಯಾಗಿಲ್ಲ ಎಂದಾಗಿದೆ. ದೇವರೇ ಬಲ್ಲವನಾಗಿದ್ದಾನೆ.

(ಅಲ್-ಸಹೀಹ್ ಮಿನ್ ಸೀರತುನ್ನಬಿ(ಸ), ಸಂಪುಟ-12, ಪುಟಗಳು-136,137. ಅಲ್-ಮರ್ಕಝುಲ್ ಇಸ್ಲಾಮಿ ಲಿದ್ದರಾಸಾತ್)

ರೈಹಾನಾ ಬಿಂತ್ ಝೈದ್ ನಜರಿಯಾ ಅವರ ಘಟನೆಯನ್ನು ಸಹ ಉಲ್ಲೇಖಿಸಲಾಗಿದೆ. ಬನೂ ಖುರೈಝಾದ ಬಂಧಿತ ಮಹಿಳೆಯರು ಮತ್ತು ಮಕ್ಕಳನ್ನು ಮದೀನಾದ ಮುಸ್ಲಿಮರ ನಡುವೆ ಹಂಚಲಾಯಿತು. ಅವರಲ್ಲಿ ಬನೂ ನಝೀರ್‌ನ ಮಹಿಳೆ ರೈಹಾನಾ ಬಿಂತ್ ಝೈದ್ ಇದ್ದರು ಅವರು ಬನೂ ಖುರೈಝಾದ ಹಕಮ್ ಎಂಬ ವ್ಯಕ್ತಿಯೊಂದಿಗೆ ವಿವಾಹವಾಗಿದ್ದರು. ಹಝ್ರತ್ ಪೈಗಂಬರ್(ಸ)ರು ಅವರನ್ನು ತನಗಾಗಿ ಆರಿಸಿಕೊಂಡಿದ್ದರು. ಕೆಲವರ ಪ್ರಕಾರ, ಅವಳು ಇಸ್ಲಾಂ ಧರ್ಮವನ್ನು ಸ್ವೀಕರಿಸಿದಳು, ಮತ್ತು ಕೆಲವರ ಪ್ರಕಾರ, ಹಝ್ರತ್ ಪೈಗಂಬರ್(ಸ)ರು ಅವಳನ್ನು ಉಪಪತ್ನಿಯಾಗಿ ಇರಿಸಿಕೊಂಡರು ಮತ್ತು ಇತರರ ಪ್ರಕಾರ ಅವಳನ್ನು ವಿವಾಹವಾಗಿದ್ದರು ಎಂದಾಗಿತ್ತು. (ಸ'ಬ್ಲುಲ್ ಹುದಾ ವರ್‌ರಶಾದ್, ಸಂಪುಟ-5, ಪುಟ-15, ದಾರುಲ್ ಕುತುಬ್ ಇಲ್‌ಮಿಯಾ, 1993) (ಸೀರತ್ ಎನ್‌ಸೈಕ್ಲೋಪೀಡಿಯಾ, ಸಂಪುಟ-7, ಪುಟಗಳು 428-429, ದಾರುಸ್ಸಲಾಮ್)

ವಿಭಿನ್ನ ವರದಿಗಳಿವೆ. ಇದು ನಿಜವೋ ಸುಳ್ಳೋ ಎಂದು ಇನ್ನೂ ವಿವರಿಸಲಾಗಿದೆ, ಈ ವರದಿಯನ್ನು ಸಂಶೋಧಿಸಿದಾಗ, ಜೀವನಚರಿತ್ರೆಕಾರರು ಅದರಲ್ಲಿ ತಪ್ಪು ಮಾಡಿದ್ದಾರೆ ಎಂದು ತಿಳಿದುಬಂದಿದೆ, ಮತ್ತು ಮೊದಲನೆಯದಾಗಿ, ಈ ವರದಿಯು ಘಟನೆಯು ವಿರುದ್ಧವಾಗಿದೆ ಮತ್ತು

ಕಟ್ಟುಕಥೆಯಾಗಿದೆ ಮತ್ತು ಅದರಲ್ಲಿ ಏನಾದರು ಸತ್ಯಾಂಶವಿದ್ದರು ಅದು ಹಝ್ರತ್ ಪೈಗಂಬರ್(ಸ)ರು ಅವಳನ್ನು ಮುಕ್ತಗೊಳಿಸಿದರು ಎಂದಾಗಿದೆ ಮತ್ತು ಅವಳು ತನ್ನ ತಾಯಿಮನೆಗೆ ಹಿಂತಿರುಗಿ ಅಲ್ಲಿಂಯೇ ಮರಣಹೊಂದಿದಳು. ಮತ್ತು ಈ ವರದಿಯನ್ನು ಒಪ್ಪಿಕೊಳ್ಳುವುದು ಅಸಾಧ್ಯವಾದರೂ, ಹಝ್ರತ್ ಪೈಗಂಬರ್(ಸ)ರು ಆಕೆಯನ್ನು ವಿವಾಹಿವಾಗಿದ್ದರು, ಆಕೆಯನ್ನು ಉಪಪತ್ನಿಯಾಗಿ ಇರಿಸಲಿಲ್ಲ.

ಆದ್ದರಿಂದ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ರೈಹಾನಾ ಅವರ ಸುಳ್ಳು ಘಟನೆಯ ಶೀರ್ಷಿಕೆಯೊಂದಿಗೆ ತಮ್ಮ ವಿವರಣೆಯಲ್ಲಿ ಹೀಗೆ ಬರೆದಿದ್ದಾರೆ, “ಕೆಲವು ಇತಿಹಾಸಕಾರರು ಬನೂ ಖುರೈಝಾದ ಕೈದಿಗಳಲ್ಲಿ ಒಬ್ಬ ಮಹಿಳೆ ರೈಹಾನಾ ಇದ್ದಳು. ಆಕೆಯನ್ನು ಹಝ್ರತ್ ಪೈಗಂಬರ್(ಸ) ಅವರು ತನ್ನ ಉಪಪತ್ನಿಯಾಗಿ ಇರಿಸಿದ್ದರು. ಅದೇ ವರದಿಯನ್ನು ಆಧಾರವಾಗಿರಿಸಿಕೊಂಡು ಈ ಸಂದರ್ಭದಲ್ಲಿ ಸರ್ ವಿಲಿಯಮ್ ಮಿಯೂರ್ ಹಝ್ರತ್ ಪೈಗಂಬರ್(ಸ)ರ ವಿರುದ್ಧ ಬಹಳ ನೋವುಂಟುಮಾಡುವ ಟೀಕೆ ಮಾಡಿದ್ದಾರೆ ಆದರೆ ಆದರೆ ಈ ವರದಿಯು ಸಂಪೂರ್ಣವಾಗಿ ತಪ್ಪು ಮತ್ತು ಆಧಾರರಹಿತವಾಗಿದೆ. ಮೊದಲನೆಯದಾಗಿ, ಸಹೀಹ್ ಬುಖಾರಿಯ ಮೇಲೆ ಉಲ್ಲೇಖಿಸಲಾದ ವರದಿಯು, ಅದರಲ್ಲಿ ಹಝ್ರತ್ ಪೈಗಂಬರ್(ಸ) ಅವರು ಬನೂ ಖುರೈಝಾದ ಕೈದಿಗಳನ್ನು ಸಹಾಬಿಗಳ ನಡುವೆ ವಿಭಜಿಸಿದರು ಎಂದು ಹೇಳಲಾಗಿದೆ, ಈ ವರದಿಯು ತಪ್ಪಾಗಿದೆ ಎಂದು ಸಾಬೀತುಪಡಿಸುತ್ತದೆ. ಹಝ್ರತ್ ಪೈಗಂಬರ್(ಸ)ರವರು ತಮ್ಮ ಮನೆಗೆ ಬಂಧಿತ ಮಹಿಳೆಯನ್ನು ಪ್ರತ್ಯೇಕಿಸಿದ್ದರೆ ಸ್ವಾಭಾವಿಕವಾಗಿ ಈ ಸಂದರ್ಭದಲ್ಲಿ ಬುಖಾರಿಯವರ ಹದೀಸಿನಲ್ಲಿ ಉಲ್ಲೇಖವಾಗಬೇಕಿತ್ತು ಆದರೆ ಬುಖಾರಿಯಲ್ಲಿ ಅದರ ಸುಳಿವು ಕೂಡ ಇಲ್ಲ. ಹೆಚ್ಚುವರಿಯಾಗಿ, ಹಝ್ರತ್ ಪೈಗಂಬರ್(ಸ) ಅವರಿಂದ ಉಪಕಾರವಾಗಿ ಬಿಡುಗಡೆಯಾದ ಕೈದಿಗಳಲ್ಲಿ ರೈಹಾನಾ ಕೂಡ ಇದ್ದಳು ಆಕೆಯು ನಂತರ ಮದೀನಾವನ್ನು ತೊರೆದು ತನ್ನ ತಾಯಿಮನೆಯ ಕುಟುಂಬಕ್ಕೆ (ಬನುನಝೀರ್) ಬಳಿ ಹೋದಳು ಎಂಬುದು ಇತರ ಅಧಿಕೃತ ಹದೀಸ್‌ಗಳಿಂದ ಖಚಿತವಾಗಿ ಸಾಬೀತಾಗಿದೆ ಮತ್ತು ಆಕೆ ಅಲ್ಲಿಯೇ ಉಳಿದುಕೊಂಡಳು ಮತ್ತು ಇಸ್ಲಾಂನ ಉನ್ನತ ವಿದ್ವಾಂಸರಲ್ಲಿ ಒಬ್ಬರಾದ ಅಲ್ಲಾಮಾ ಇಬ್ನ್ ಹಜರ್ ಅವರು ಈ ವರದಿಯನ್ನು ಸರಿ ಎಂದು ಘೋಷಿಸಿದ್ದಾರೆ. ಆದರೆ ರೈಹಾನಾಳನ್ನು ಹಝ್ರತ್ ಪೈಗಂಬರ್(ಸ) ರು ತನ್ನ ಪಾಲನೆಗೆ ತೆಗೆದುಕೊಂಡಿದ್ದರು ಎಂದು ಒಪ್ಪಿಕೊಂಡರೂ ಸಹ, ಆಕೆಯು ಖಂಡಿತವಾಗಿಯೂ ಆಕೆಯು ಅವರ ಪತ್ನಿಯಾಗಿದ್ದರು ಉಪಪತ್ನಿಯಾಗಿರಲಿಲ್ಲ. ಆದ್ದರಿಂದ, ಹಝ್ರತ್ ಪೈಗಂಬರ್(ಸ) ರವರು ಆಕೆಯನ್ನು ತಮ್ಮ ಆಶ್ರಯದಲ್ಲಿ ತೆಗೆದುಕೊಂಡಿದ್ದಾರೆ ಎಂದು ರೈಹಾನಾ ಬಗ್ಗೆ ವಿವರಿಸಿರುವ ಹೆಚ್ಚಿನ ಇತಿಹಾಸಕಾರರು ಹಝ್ರತ್ ಪೈಗಂಬರ್(ಸ) ಅವರು ಆಕೆಯನ್ನು ಮುಕ್ತಗೊಳಿಸಿ ವಿವಾಹವಾದರು ಎಂದು ಹೇಳಿದ್ದಾರೆ. ಹೀಗಾಗಿ, ಇಬ್ನ್ ಸಅದ್ ಅವರು ಸ್ವತಃ ರೈಹಾನಾ ಅವರ ಮಾತುಗಳಿಂದ ಒಂದು ವರದಿಯನ್ನು ವಿವರಿಸಿದ್ದಾರೆ, ಅದರಲ್ಲಿ ಅವರು ಹೀಗೆ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ನನ್ನನ್ನು ಮುಕ್ತಗೊಳಿಸಿದರು ಮತ್ತು ನಾನು ಮುಸ್ಲಿಂ ಆದ ನಂತರ ನನ್ನನ್ನು ಮದುವೆಯಾದರು ಮತ್ತು ನನ್ನ ವರದಕ್ಷಿಣೆ ಹನ್ನೆರಡು ಓಕಿಯಾ (ನಲವತ್ತು ದಿರ್ಹಮ್ಸ್) ಎಂದು ನಿರ್ಧರಿಸಲಾಯಿತು. ಮತ್ತು ಇಬ್ನ್ ಸಅದ್ ಅವರು ಈ ವರದಿಯನ್ನು ಸರ್ ವಿಲಿಯಮ್ ಮಿಯೂರ್ ಆಧರಿಸಿದ ಇತರ ಹದೀಸ್‌ಗೆ ಹೋಲಿಸಿದರು, ಅದು ಸುಳ್ಳು ಮತ್ತು ವಿರೋಧಾತ್ಮಕವಾಗಿದೆ ಎಂದು ಸ್ಪಷ್ಟವಾಗಿ ಘೋಷಿಸಿದರು.” ಮತ್ತು ಇದು ವಿದ್ವಾಂಸರ ಸಂಶೋಧನೆಯಾಗಿದೆ ಎಂದು ಬರೆಯಲಾಗಿದೆ. ಒಟ್ಟಿನಲ್ಲಿ ಮೊದಲನೆಯದಾಗಿ, ಬುಖಾರಿಯ ವರದಿಯಿಂದ ಸ್ಪಷ್ಟವಾಗುತ್ತದೆ ಮತ್ತು ಅಸಬಾದಲ್ಲಿ ನಿರ್ದಿಷ್ಟಪಡಿಸಿದಂತೆ, ಹಝ್ರತ್ ಪೈಗಂಬರ್(ಸ)ರು ರೈಹಾನಾ ಅವರನ್ನು ತನ್ನ ಪಾಲನೆಗೆ ತೆಗೆದುಕೊಳ್ಳಲಿಲ್ಲ ಬದಲಿಗೆ ಆಕೆಯನ್ನು ಮುಕ್ತಗೊಳಿಸಿದರು. ತದನಂತರ ಆಕೆಯು ತನ್ನ ಕುಟುಂಬಕ್ಕೆ ಹೋಗಿ ನೆಲೆಸಿದಳು. ಎರಡನೆಯದಾಗಿ, ಈ ಹದೀಸನ್ನು ಹಝ್ರತ್ ಪೈಗಂಬರ್(ಸ)ರು ತನ್ನ ಆಶ್ರಯದಲ್ಲಿ ತೆಗೆದುಕೊಂಡರು ಎಂದು ಒಪ್ಪಿಕೊಂಡರೂ, ಹಝ್ರತ್ ಪೈಗಂಬರ್(ಸ) ಆಕೆಯನ್ನು ಮುಕ್ತಗೊಳಿಸಿದರು ಮತ್ತು ಆಕೆಯನ್ನು ವಿವಾಹವಾದರು ಆಕೆಯನ್ನು ಉಪಪತ್ನಿಯನ್ನಾಗಿ ಇರಿಸಲಿಲ್ಲ.” ಇದಲ್ಲದೆ, ರೈಹಾನಾ ಅವರ ಹೆಸರು ಮತ್ತು ವಂಶಾವಳಿ ಮತ್ತು ಗೋತ್ರ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಹದೀಸ್‌ಗಳಲ್ಲಿ ಹಲವಾರು ವ್ಯತ್ಯಾಸಗಳಿವೆ, ಆಕೆಯ ಅಸ್ತಿತ್ವವನ್ನು ಅನುಮಾನಿಸುವುದು ಬಹುಶಃ ಅಸಮಂಜಸವೆಂದು ಪರಿಗಣಿಸಲಾಗುವುದಿಲ್ಲ ಎಂದು ನೆನಪಿನಲ್ಲಿಡಬೇಕು. ವಿಶೇಷವಾಗಿ ಅವಳು ಖಂಡಿತವಾಗಿಯೂ ಪ್ರಪಂಚದ ಅತ್ಯಂತ ಐತಿಹಾಸಿಕ ವ್ಯಕ್ತಿಯಾಗಿರುವ ವ್ಯಕ್ತಿಯ ಪತ್ನಿ ಎಂದು ಹೇಳಲಾಗುತ್ತದೆ ಎಂದು ಗಣನೆಗೆ ತೆಗೆದುಕೊಂಡಾಗ, ದೇವರೇ ಬಲ್ಲವನಾಗಿದ್ದಾನೆ. (ಸೀರತ್ ಖಾತಮುನ್ನಬಿಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ), ಪುಟ–604, 605) (ಹದೀಸ್‌ನ ನಿಘಂಟು, ಸಂಪುಟ–4, ಪುಟ–527)

ಯುದ್ಧ ಸಂಪತ್ತಿನ ವಿತರಣೆಯ ವಿವರವೆಂದರೆ ಯುದ್ಧ ಸಂಪತ್ತನ್ನು ಸಂಗ್ರಹಿಸಿದಾಗ ಹಝ್ರತ್ ಪೈಗಂಬರ್(ಸ)ರು ಅದನ್ನು ಖರ್ಜೂರದ ಭಾಗಗಳಾಗಿ ವಿಂಗಡಿಸಿದರು. ಈ ಯುದ್ಧದಲ್ಲಿ ಮೂವತ್ತಾರು ಕುದುರೆಗಳಿದ್ದವು. ಕುದುರೆಗೆ ಎರಡು ಭಾಗ ಮತ್ತು ಅಶ್ವದಳಕ್ಕೆ ಒಂದು ಭಾಗ ಮತ್ತು ಕಾಲಾಳುಪಡೆಗೆ ಒಂದು ಭಾಗವನ್ನು ನಿಗದಿಪಡಿಸಲಾಯಿತು. ಒಂದು ಸಾವಿರ ಮಹಿಳೆಯರು ಮತ್ತು ಮಕ್ಕಳು ಕೈದಿಗಳಾಗಿದ್ದರು. ಹಝ್ರತ್ ಪೈಗಂಬರ್(ಸ)ರು ಅದನ್ನು ವಿತರಿಸುವ ಮೊದಲು ಯುದ್ಧ ನಂಪತ್ತಿನಿಂದ ಖುಮ್ಸ್ ಅನ್ನು ಪ್ರತ್ಯೇಕಿಸಿದರು. ಖೈದಿಗಳನ್ನು ಐದು ಭಾಗಗಳಾಗಿ ವಿಂಗಡಿಸಲಾಯಿತು ಮತ್ತು ಖುಮ್ಸ್ ಅನ್ನು ಅದರಲ್ಲಿ ಖುಮ್ಸ್ ಅನ್ನು ಇರಿಸಲಾಯಿತು. ನೀವು(ಸ) ಅದರಿಂದ ಮುಕ್ತಗೊಳಿಸುತ್ತಿದ್ದರು ಮತ್ತು ಉಡುಗೋರೆಯಾಗಿ ಮಾಡುತ್ತಿದ್ದರು ಮತ್ತು ಗುಲಾಮರನ್ನಾಗಿ ಮಾಡುತ್ತಿದ್ದರು. ಅದೇ ರೀತಿಯಲ್ಲಿ, ಖುಮ್ಸ್ ಅನ್ನು ಖರ್ಜೂರದಿಂದ ಹೊರತೆಗೆದರು ಮತ್ತು ಎಲ್ಲದರಿಂದಲೂ ಖುಮ್ಸ್ ಅನ್ನು ತೆಗೆದು ಅದರ ಪಾಲನ್ನು ವಿತರಿಸಲಾಯಿತು. ಅವುಗಳಲ್ಲಿ ಪ್ರತಿಯೊಂದಕ್ಕೂ ಬಹಳಷ್ಟು ಚೀಟಿ ಹಾಕಲಾಗುತ್ತಿತ್ತು ಮತ್ತು ಅದರಿಂದ ಖುಮ್ಸ್ ಭಾಗವನ್ನು ತೆಗೆದುಕೊಳ್ಳುತ್ತಿದ್ದರು ಮತ್ತು ಅವರು ಹಝ್ರತ್ ಮಹ್ಮಿಯಾ ಬಿನ್ ಜಾಝ್ಹಾ ಝುಬೈದಿ ಅವರನ್ನು ಖುಮ್ಸ್‌ನ ಮೇಲ್ವಿಚಾರಕರಾಗಿ ನೇಮಿಸಿದರು. ನಂತರ ಉಳಿದ ನಾಲ್ಕು ಭಾಗಗಳನ್ನು ಭಾಗಿಸಿ. ಹಝ್ರತ್ ಪೈಗಂಬರ್(ಸ) ಅವರು ಯುದ್ಧದ ಸಮಯದಲ್ಲಿ ಹಾಜರಿದ್ದ ಮಹಿಳೆಯರಿಗೆ ಅದನ್ನು ನೀಡಿದರು. ಈ ಮಹಿಳೆಯರಲ್ಲಿ ಹಝ್ರತ್ ಸಫಿಯಾ ಬಿನ್ತ್ ಅಬ್ದುಲ್ ಮುತ್ತಲಿಬ್(ರ), ಹಝ್ರತ್ ಉಮ್ಮ್ ಅಮರಾ(ರ), ಹಝ್ರತ್ ಉಮ್ಮ್ ಸಾಲಿತ್(ರ), ಹಝ್ರತ್ ಉಮ್ಮ್ ಅಲಾ(ರ) ಅನ್ಸಾರಿಯಾ, ಹಝ್ರತ್ ಸಮಿರಾ(ರ) ಬಿಂತ್ ಖೈಸ್(ರ), ಹಝ್ರತ್ ಉಮ್ಮೆ ಸಅದ್ ಬಿನ್ ಮುಆದ್(ರ), ಮತ್ತು ಹಝ್ರತ್ ಕುಬ್‌ಶ ಬಿಂತ್ ರಾಫಿ(ರ) ಸೇರಿದ್ದರು. ಹಝ್ರತ್ ಪೈಗಂಬರ್(ಸ) ಅವರು ಖುಮ್ಸ್ ಆಸ್ತಿಯನ್ನು ಮಾರಾಟ ಮಾಡಲು ಹಝ್ರತ್ ಸಅದ್ ಬಿನ್ ಉಬಾದಾ(ರ) ಅವರನ್ನು ಸಿರಿಯಾಕ್ಕೆ ಕಳುಹಿಸಿದರು, ಅಂದರೆ ಖೈದಿಗಳು, ಇತ್ಯಾದಿ, ಅವರಿಗೆ ಬದಲಾಗಿ ಶಸ್ತ್ರಾಸ್ತ್ರಗಳು ಮತ್ತು ಕುದುರೆಗಳನ್ನು ಖರೀದಿಸಲು ಕಳುಹಿಸಿದರು. ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ) ಮತ್ತು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಅವರು ಅದರ ಒಂದು ಭಾಗವನ್ನು ಖರೀದಿಸಿದರು ಎಂಬ ವರದಿ ಇದೆ. (ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ–5, ಪುಟ–15, 16, ದಾರುಲ್ ಕುತುಬ್ ಇಲ್‌ಮಿಯಾ 1993) ಆದರೆ ಈ ಎಲ್ಲಾ ಕೈದಿಗಳನ್ನು ಮದೀನಾದಲ್ಲಿ ಇರಿಸಲಾಗಿತ್ತು ಮತ್ತು ಅವರನ್ನು ಎಲ್ಲಿಯೂ ಕಳುಹಿಸಲಾಗಿಲ್ಲ ಎಂಬ ಅಭಿಪ್ರಾಯವೂ ಇದೆ. ನಂತರ ಹಝ್ರತ್ ಪೈಗಂಬರ್(ಸ)ರು ಅವರನ್ನು ಕ್ರಮೇಣವಾಗಿ ಬಿಡುಗಡೆ ಮಾಡಿದರು. ಆದ್ದರಿಂದ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ವಿವಿಧ ಐತಿಹಾಸಿಕ ಪುಸ್ತಕಗಳಿಂದ ತಮ್ಮ ಸಂಶೋಧನೆಯನ್ನು ಮಾಡಿದ್ದಾರೆ. ಅವರು ಬರೆಯುತ್ತಾರೆ: “ಸಅದ್ ಅವರ ನಿರ್ಧಾರದ ಪ್ರಕಾರ ಜೈಲಿನಲ್ಲಿದ್ದ ಮಕ್ಕಳು ಮತ್ತು ಮಹಿಳೆಯರನ್ನು, ಹಝ್ರತ್ ಪೈಗಂಬರ್(ಸ)ರು ನಜದ್‌ಗೆ ಕಳುಹಿಸಿದ್ದಾರೆ ಎಂದು ಕೆಲವು ಹದೀಸ್‌ಗಳಿಂದ ತಿಳಿದುಬಂದಿದೆ, ಅಲ್ಲಿ ನಜದಿನ ಕೆಲವು ಗೋತ್ರಗಳು ಅವರ ಪರವಾಗಿ ಪರಿಹಾರ ಧನವನ್ನು ನೀಡಿ ಅವರನ್ನು ಬಿಡುಗಡೆಗೊಳಿಸಿದ್ದರು. ಆ ಹಣದಿಂದ ಮುಸ್ಲಿಮರು ಯುದ್ಧಕ್ಕಾಗಿ ತಮಗೆ ಬೇಕಾದ ಅಗತ್ಯ ಸಾಮಾನುಗಳಾದ ಕುದುರೆಗಳನ್ನು ಮತ್ತು ಆಯುಧಗಳನ್ನು ಖರೀದಿ ಮಾಡಿದ್ದರು. ಹೀಗೆ ನಡೆದಿರಬಹುದು ಎಂಬುದು ಸಾಧ್ಯತೆಯಿಲ್ಲದ ಸಂಗತಿಯೇನಲ್ಲ. ಏಕೆಂದರೆ ನಜದಿ ಗೋತ್ರಗಳು ಮತ್ತು ಬನೂ ಖುರೈಝ ಗೋತ್ರ ಪರಸ್ಪರ ಮಿತ್ರ ಗೋತ್ರಗಳಾಗಿದ್ದುವು. ಮತ್ತು ಖುರೈಝಾ ಯುದ್ಧದ ಕೆಲವೇ ದಿನಗಳ ಮೊದಲು ಅವರು ಅಹ್‌ಝಾಬ್ ಯುದ್ಧದಲ್ಲಿ ಮುಸ್ಲಿಮರ ವಿರುದ್ಧ ಬಂಡಾಯದ ಬಾವುಟವನ್ನು ಎತ್ತಿದರು ಹಾಗಾಗಿ, ನಜದ್ ಜನರು ತಮ್ಮ ಮಿತ್ರರಾದ ಬನೂ ಖುರೈಝಾ ಅವರ ಕೈದಿಗಳನ್ನು ಮುಸ್ಲಿಮರ ಕೈಯಿಂದ ರಕ್ಷಿಸಿದ್ದಾರೆ ಎಂದಾದರೆ ಅದರಲ್ಲಿ ಆಶ್ಚರ್ಯವೇನಿಲ್ಲ, ಆದರೆ ಈ ಕೈದಿಗಳು ಮದೀನಾದಲ್ಲಿ ಉಳಿದುಕೊಂಡಿದ್ದಾರೆ ಎಂಬುದು ಸರಿಯಾದ ವರದಿಗಳಿಂದ ತಿಳಿದುಬಂದಿದೆ. ಹಝ್ರತ್ ಪೈಗಂಬರ್(ಸ) ಅವರು ಸಂವಿಧಾನದ ಪ್ರಕಾರ ವಿವಿಧ ಸಹಾಬಗಳ ಮೇಲ್ವಿಚಾರಣೆಯಲ್ಲಿ ಅವುಗಳನ್ನು ವಿತರಿಸಿದರು. ತದನಂತರ ಅವರಲ್ಲಿ ಕೆಲವರು ಫಿದ್ಯಾ ಪಾವತಿಸಿ ಬಿಡುಗಡೆ ಪಡೆದರು. ಮತ್ತು ಕೆಲವರನ್ನು ಹಝ್ರತ್ ಪೈಗಂಬರ್(ಸ) ಸುಮ್ಮನೇ ಔದಾರ್ಯವೆಂಬಂತೆ ಬಿಡುಗಡೆಗೊಳಿಸಿದ್ದರು. ತದನಂತರ ಈ ಜನರು ಕ್ರಮೇಣ ಮುಸ್ಲಿಮರಾದರು. ಹೀಗೆ, ಅತಿಯಾಹ್ ಕುರಾಝಿ, ಅಬ್ದುರ್ರಹ್ಮಾನ್ ಬಿನ್ ಝುಬೈರ್ ಬಿನ್ ಬತಿಯಾ, ಕಅಬ್ ಬಿನ್ ಸುಲೇಮ್ ಮತ್ತು

ಮುಹಮ್ಮದ್ ಬಿನ್ ಕಅಬ್ ಅವರ ಹೆಸರುಗಳು ಇತಿಹಾಸದಲ್ಲಿ ಸಂರಕ್ಷಿಸಲ್ಪಟ್ಟಿವೆ ಮತ್ತು ಅವರೆಲ್ಲರೂ ಮುಸ್ಲಿಮರಾದರು.
(ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ-603, 604)

ಈ ಬಂಧಿತ ಮಹಿಳೆಯರನ್ನು ವಿತರಿಸಲಾಯಿತು ಅಥವಾ ಮಾರಾಟ ಮಾಡಲಾಯಿತು, ಹಝ್ರತ್ ಪೈಗಂಬರ್(ಸ) ಅವರು ತಮ್ಮ ಮಹಾನ್ ಕರುಣೆ ಮತ್ತು ಮಹಿಳೆಯರ ಹಿತಚಿಂತಕರಾಗಿ ರೇಶ್ಮೆಯ ನೀರಿನಿಂದ ಬರೆಯಲು ಯೋಗ್ಯವಾದ ಆದೇಶವನ್ನು ನೀಡಿದರು.

ಈ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಒಂದು ಆದೇಶವನ್ನು ನೀಡಿದರು. ಅದು ಹಝ್ರತ್ ಪೈಗಂಬರ್(ಸ)ರ ಕಾರುಣ್ಯದ ವಿಶಾಲತೆ ಮತ್ತು ಸ್ತ್ರೀಯರ ಹಿತೈಷಿ ಎಂಬ ರೀತಿಯಲ್ಲಿ ಸ್ವರ್ಣಲಿಪಿಯಿಂದ ಬರೆಯಲು ಯೋಗ್ಯವಾಗಿದೆ. ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ವಿತರಣೆ ಮಾಡಲ್ಪಡುವ ಅಥವಾ ಮಾರಾಟಗೊಳ್ಳಲ್ಪಡುವ ಮಹಿಳೆಯರ ಜೊತೆಗೆ ಸಣ್ಣ ಮಗು ಇರುವುದಾದರೆ ಮಗು ಪ್ರೌಢ ವಯಸ್ಸಿಗೆ ತಲುಪುವ ವರೆಗೆ ತಾಯಿಯಿಂದ ಬೇರ್ಪಡಿಸಬಾರದು. ಅದೇ ರೀತಿಯಲ್ಲಿ ಇಬ್ಬರು ಕಿರಿಯ ಸಹೋದರಿಗಳು ಇರುವುದಾದರೆ ಅವರನ್ನು ಸಹ ಪೌಢ ವಯಸ್ಸಿಗೆ ತಲುಪುವ ತನಕ ಬೇರ್ಪಡಿಸಬಾರದು. (ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ-5, ಪುಟ-16, ದಾರುಲ್ ಕುತುಬ್ ಇಲ್‌ಮಿಯಾ 1993) (ಗಝ್ವಾ ಬನೂ ಖುರೈಝಾ, ಬಾಶಮಾಯಿಲ್, ಪುಟ-181, ನಫೀಸ್ ಅಕಾಡಮಿ ಕರಾಚಿ)

ಇದಾಗಿದೆ ಲೋಕಕ್ಕೆ ಕಾರುಣ್ಯನಿಧಿಯಾದ ಪ್ರವಾದಿಯ ಕೃತ್ಯ ಮತ್ತು ಮಹಿಳೆಯರು, ಕೈದಿಗಳು ಮತ್ತು ತನ್ನ ವಿರೋಧಿಗಳ ಮೇಲಿನ ಔದಾರ್ಯ. ಆದರೆ ಇಂದು ಮುಸ್ಲಿಮರ ಸ್ಥಿತಿಯನ್ನು ನೋಡಿರಿ, ಅಲ್ಲಾಹನ ಮತ್ತು ಅವನ ಪ್ರವಾದಿಯ ಹೆಸರಲ್ಲಿ ಜನರನ್ನು ಮನೆಯಿಂದ ಹೊರಗೆ ಹಾಕುತ್ತಾರೆ ಮತ್ತು ಕೊಲೆ ಮಾಡುತ್ತಾರೆ. ಅನಂತರ ಅದರ ಫಲಿತಾಂಶ ಏನೆಂದರೆ, ಮುಸ್ಲಿಮರ ಸ್ವಂತ ಗೌರವ ಕೊನೆಗೊಳ್ಳುತ್ತಿದೆ.

ಸರ್ವಶಕ್ತನಾದ ಅಲ್ಲಾಹನು ಮುಸ್ಲಿಮರಿಗೂ ಬುದ್ಧಿ ಮತ್ತು ವಿವೇಕ ನೀಡಲಿ – ಆಮೀನ್.

(ಅಲ್ ಫಜ್ಲ್ ಇಂಟರ್ನ್ಯಾಷನಲ್ 15 ನವೆಂಬರ್ 2024

-------------*****-------------

*(ಪುಟ ಸಂಖ್ಯೆ 01ರ ಉಳಿದ ಭಾಗ)*

ವೈಫಲ್ಯದ ಮೇಲೆ ವೈಫಲ್ಯವಾಗುತ್ತಿದೆ ಅದರೂ ಅವರು ಇದರಿಂದ ಹಿಂದಿರುಗುತ್ತಿಲ್ಲ. ದೇವರಿಲ್ಲದಿದ್ದರೆ, ನೀವು ಖಂಡಿತವಾಗಿಯೂ ಅವನನ್ನು ಬಿಟ್ಟು ಪ್ರಗತಿ ಹೊಂದಬಹುದು ಆದರೆ ದೇವರು ಇದ್ದಾನೆ ಮತ್ತು ಅವಶ್ಯವಾಗಿ ಇದ್ದಾನೆ, ಮತ್ತೆ ಅವನನ್ನು ಹೊರತುಪಡಿಸಿ ಒಬ್ಬನು ಎಂದಿಗೂ ಪ್ರಗತಿ ಹೊಂದಲು ಸಾಧ್ಯವಿಲ್ಲ. ಅವನನ್ನು ಅಗೌರವಿಸುವ ಮೂಲಕ, ಅವನ ಗ್ರಂಥವನ್ನು ಅಗೌರವಿಸುವ ಮೂಲಕ, ಅವರು ಯಶಸ್ವಿಯಾಗಲು ಮತ್ತು ಒಂದು ಸಮುದಾಯವಾಗಲು ಬಯಸಿದರೆ ಅದು ಎಂದಿಗೂ ಸಾಧ್ಯವಿಲ್ಲ.

ನಮ್ಮ ಅಭಿಪ್ರಾಯ ಏನೆಂದರೆ, ಅದನ್ನು ಕಣ್ಣುಗಳು ನೋಡುತ್ತದೆ, ದೇವರನ್ನು ಗುರುತಿಸಿಕೊಳ್ಳುವುದು ಮತ್ತು ಆತನಲ್ಲಿ ಜೀವಂತ ವಿಶ್ವಾಸವನ್ನು ಬೆಳೆಸಿಕೊಳ್ಳುವುದು ಮಾತ್ರ ಪ್ರಗತಿಯ ಮಾರ್ಗವಾಗಿದೆ.

**(ಮಲ್‌ಫೂಝಾತ್, ಸಂಪುಟ-2, ಪುಟ-44, ಆವೃತ್ತಿ 2018, ಖಾದಿಯಾನ್)**

-------------*****-------------

## ತಫ್ಸೀರೆ ಕಬೀರ್

ಇಸ್ಲಾಮಿನ ಶರೀಅತ್ ನೀಡಿದ ಆಜ್ಞೆಗಳನ್ನೆಲ್ಲವು ಮನುಕುಲದ ಒಳಿತಿಗಾಗಿ ನೀಡಿದೆ ಇಲ್ಲದಿದ್ದರೆ, ಸರ್ವಶಕ್ತನಾದ ಅಲ್ಲಾಹನಿಗೆ ಅವುಗಳಲ್ಲಿ ಯಾವ ಅವಶ್ಯಕತೆಯು ಇಲ್ಲ

ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಸೂರಾ ಅಲ್-ಹಜ್ಜ ವಚನ 65 ರ ವ್ಯಾಖ್ಯಾನದಲ್ಲಿ ಹೀಗೆ ಹೇಳುತ್ತಾರೆ:

ಅಲ್ಲಾಹನು ನುಡಿಯುತ್ತಾನೆ: ಭೂಮಿಯಲ್ಲಿ ಮತ್ತು ಆಕಾಶದಲ್ಲಿ ಇರುವುದೆಲ್ಲವೂ ಭಗವಂತನಿಗೆ ಸೇರಿದ್ದು ಮತ್ತು ಅವನಿಗೆ ಯಾವ ಅಗತ್ಯವಿಲ್ಲ. ಆದ್ದರಿಂದ ಅವನು ನಿಮ್ಮಿಂದ ಬಯಸುವ ಪ್ರತಿಯೊಂದು ತ್ಯಾಗವೂ ನಿಮ್ಮ ಪ್ರಯೋಜನಕ್ಕಾಗಿಯೇ ಹೊರತು ಅವನ ಸ್ವಂತ ಲಾಭಕ್ಕಾಗಿ ಅಲ್ಲ. ಆದ್ದರಿಂದ, ಇಸ್ಲಾಮಿನ ಬೋಧನೆಗಳ ಬಗ್ಗೆ ಯೋಚಿಸಿರಿ, ಅವನು ಆದೇಶಿಸಿರುವಷ್ಟು ಆಜ್ಞೆಗಳನ್ನು ಮಾನವಕುಲದ ಪ್ರಯೋಜನಕ್ಕಾಗಿ ಮಾತ್ರ ನೀಡಿದ್ದಾನೆಯೇ ಹೊರತು ಅವನ ಪ್ರಭುತ್ವದಲ್ಲಿ ವೃದ್ಧಿಯಾಗುತ್ತದೆ ಎಂದಲ್ಲ. ಅಲ್ಲಾಹನು ನಮಾಝ್‌ಗಳನ್ನು ನಿರ್ವಹಿಸಲು ಆದೇಶಿಸಿದ್ದರೆ ಅಥವಾ ಅವನು ಉಪವಾಸದ ಬಗ್ಗೆ ಆದೇಶಿಸಿದ್ದರೆ ಅಥವಾ ಝಕಾತ್, ಸದಖ ಮತ್ತು ದಾನದ ಬಗ್ಗೆ ಆದೇಶಿಸಿದರೆ ಅಥವಾ ಹಜ್ಜ್‌ನ ಬಗ್ಗೆ ಆದೇಶಿಸಿದ್ದರೆ, ಈ ಎಲ್ಲಾ ಆದೇಶಗಳ ಪ್ರಯೋಜನವು ಮನುಷ್ಯನ ಸ್ವಂತಕ್ಕಾಗಿಯೇ ತಲುಪುತ್ತದೆಯೇ ಹೊರತು ಸರ್ವಶಕ್ತನಾದ ಅಲ್ಲಾಹನಿಗಲ್ಲ. ಉದಾಹರಣೆಗೆ, ನಮಾಝ್ ಬಗ್ಗೆಯೇ ನೋಡಿ, ಸವಶಕ್ತನಾದ ಅಲ್ಲಾಹನು ನುಡಿಯುತ್ತಾನೆ: **ಇನ್ನಸ್ಸಲಾತ ತನ್‌ಹಾ ಅನಿಲ್ ಫಹ್‌ಶಾಇ ವಲ್‌ಮುನ್ಕರ್** (ಅನ್ಕಬೂತ್, ರುಕು 5) ನಮಾಝ್ ಮನುಷ್ಯನನ್ನು ಕೆಡಕಿನಿಂದ ತಡಿಯುತ್ತದೆ. ಹೀಗಾಗಿ ಯಾವ ವ್ಯಕ್ತಿಯು ಸರಿಯಾದ ರೀತಿಯಲ್ಲಿ ನಮಾಝ್ ನಿರ್ವಹಿಸುತ್ತಾನೆ ಅವರಿಗೆ ಅನ್ಯ ಆಧ್ಯಾತ್ಮಿಕ ಪ್ರಯೋಜನಗಳು ಲಭಿಸುತ್ತದೆ. ಅದಲ್ಲದೆ ವಯಕ್ತಿಕ ಪ್ರಯೋಜನವೆಂದರೆ ಅವನು ಕೆಡಕಿನಿಂದ ಸುರಕ್ಷಿತನಾಗಿರುತ್ತಾನೆ. ಅದೇ ರೀತಿಯಲ್ಲಿ, ನಮಾಝ್‌ನ ಪ್ರಯೋಜನವೆಂದರೆ ಸಾಮುದಾಯಿಕ ವ್ಯವಸ್ಥೆಯನ್ನು ಒಗ್ಗೂಡಿಸುವ ಕಲ್ಪನೆಯು ಯಾವಾಗಲೂ ವ್ಯಕ್ತಿಯ ಮನಸ್ಸಿನಲ್ಲಿ ಎಚ್ಚರವಾಗಿರುತ್ತದೆ ಮತ್ತು ಅವನಿಗೆ ಪ್ರತಿನಿತ್ಯ ದೇವಸ್ಮರಣೆಯನ್ನು ಉತ್ತುಂಗಕ್ಕೇರಿಸಲು ಅನುಸರಿಸಲು ಬಾಧ್ಯತೆ ಹೊಂದಿರುವ ಇಮಾಮ್ ಅನ್ನು ನಾವು ಹೊಂದಿದ್ದೇವೆ ಎಂಬ ಭಾವನೆಯನ್ನು ಹೊಂದಿರುತ್ತಾನೆ. ಅದೇ ರೀತಿ ಮಸೀದಿಯಲ್ಲಿ ಐದು ಹೊತ್ತು ನಮಾಝ್‌ಗಾಗಿ ಹೋಗುವುದು ಮಾನವಕುಲಕ್ಕೆ ವೈಯಕ್ತಿಕ ಪ್ರಯೋಜನವನ್ನು ತರುತ್ತದೆ ಏಕೆಂದರೆ ಅದರ ಪರಿಣಾಮವಾಗಿ, ನಾವು ಪರಸ್ಪರರ ಪರಿಸ್ಥಿತಿಗಳನ್ನು ತಿಳಿದುಕೊಳ್ಳಬಹುದು ಮತ್ತು ಮುಸ್ಲಿಂ ಸಾಂಸ್ಥಿಕ ರೂಪದಲ್ಲಿ ಅನೇಕ ಪ್ರಯೋಜನಗಳನ್ನು ಪಡೆಯಬಹುದು.

ಅಂತೆಯೇ, ಉಪವಾಸವು ಒಂದು ಪ್ರಮುಖ ಇಸ್ಲಾಮಿನ ಆರಾಧನೆಯಾಗಿದೆ, ಆದರೆ ಅದರ ಪ್ರಯೋಜನವು ಸ್ವತಃ ವ್ಯಕ್ತಿಯನ್ನು ತಲುಪುತ್ತದೆ ಸರ್ವಶಕ್ತನಾದ ಅಲ್ಲಾಹನಿಗೆ ತಲುಪುವುದಿಲ್ಲ. ಉಪವಾಸವು ಜನರಲ್ಲಿ ಕಠಿಣ ಪರಿಶ್ರಮದ ಅಭ್ಯಾಸವನ್ನು ಹುಟ್ಟುಹಾಕುತ್ತದೆ ಮತ್ತು ಇದು ವಿಭಿನ್ನ ಸಮಯಗಳಲ್ಲಿ ಬಹಳ ಉಪಯುಕ್ತವಾಗಿರುತ್ತದೆ ಮತ್ತು ಅದೇ ರೀತಿ ಉಪವಾಸದ ಮೂಲಕ ಬಡವರ ಪರಿಸ್ಥಿತಿಯ ಬಗ್ಗೆ ಅರಿವಾಗುತ್ತದೆ. ಮತ್ತು ಅವರಿಗೆ ಅಭಿವೃದ್ಧಿಪಡಿಸುವ ಉತ್ಸಾಹವು ಬೆಳೆಯುತ್ತದೆ. ಒಟ್ಟಾರೆಯಾಗಿ ಇದರಿಂದ ಇಡೀ ಸಮುದಾಯುವು ಪ್ರಯೋಜನ ಪಡೆಯುತ್ತದೆ. ಮತ್ತು ಅಭಿವೃದ್ಧಿಯ ಹಂತಗಳನ್ನು ಬೇಗ ಬೇಕನೇ ಹೊಂದಿಸಲು ಪ್ರಾರಂಭಿಸುತ್ತದೆ. ಝಕಾತ್‌ನ ವಿಷಯವೂ ಅದೇ ಆಗಿದೆ, ಇದು ಸಾಮುದಾಯಿಕ ಅಭಿವೃದ್ಧಿಯ ಉತ್ತಮ ಮೂಲವಾಗಿದೆ ಏಕೆಂದರೆ ಸರ್ಕಾರವು ಶ್ರೀಮಂತರಿಂದ ಅವರ ಸಂಪತ್ತಿನ ಒಂದು ಭಾಗವನ್ನು ತೆಗೆದುಕೊಂಡು ಅದನ್ನು ಬಡವರ ಮೇಲೆ ಖರ್ಚು ಮಾಡುತ್ತದೆ. ಹೀಗೆ ಬಡವರು, ನಿರ್ಗತಿಕರು ಮತ್ತು ವಿಪತ್ತುಗಳಿಂದ ಬಳಲುತ್ತಿರುವ ಜನರು ತಮ್ಮ ಸ್ವಂತ ಕಾಲಿನ ಮೇಲೆ ನಿಲ್ಲುವ ಶಕ್ತಿಯನ್ನು ಪಡೆಯುತ್ತಾರೆ ಹೀಗೆ ಸಮುದಾಯದಲ್ಲಿ ಮತ್ತು ದೇಶದಲ್ಲಿ ದೌರ್ಬಲ್ಯವಿರುವುದಿಲ್ಲ.

ಅದೇ ರೀತಿಯಲ್ಲಿ, ಹಜ್ಜ್ ಕೂಡ ಇಸ್ಲಾಂ ಧರ್ಮದ ಸ್ತಂಭಗಳಲ್ಲಿ ಸೇರಿಸಲಾಗಿದೆ, ಆದರೆ ನಾವು ಯೋಚಿಸಿದರೆ, ಅದರ ಪ್ರಯೋಜನವು ಮುಸ್ಲಿಮರನ್ನೂ ತಲುಪುತ್ತದೆ, ಏಕೆಂದರೆ ಅದು ಸರ್ವಶಕ್ತನಾದ ಅಲ್ಲಾಹನ ಸಲುವಾಗಿ ತಮ್ಮ ತಾಯ್ನಾಡನ್ನು ತೊರೆಯುವ ಅಭ್ಯಾಸವನ್ನು ಸೃಷ್ಟಿಸುತ್ತದೆ ಮತ್ತು ನಂತರ ಮಕ್ಕಾದಲ್ಲಿ ಇಡೀ ವಿಶ್ವದ ಮುಸ್ಲಿಮರು ಎಲ್ಲಾ ಕಡೆಯಿಂದ ಒಟ್ಟುಗೂಡಿದಾಗ, ಜಾಗತಿಕ ಸಹೋದರತ್ವದ ಭಾವನೆ ಬೆಳೆಯುತ್ತದೆ ಮತ್ತು ಪರಸ್ಪರ ಏಕತೆಯ ಅಡಿಪಾಯ ಬಲಗೊಳ್ಳುತ್ತದೆ.

ಆದ್ದರಿಂದ, ಇಸ್ಲಾಮಿನ ಶರಿಯತ್ ನೀಡಿದಷ್ಟು ಆಜ್ಞೆಗಳನ್ನು ಮನುಕುಲದ ಒಳಿತಿಗಾಗಿ ನೀಡಿದೆ, ಇಲ್ಲದಿದ್ದರೆ ಸರ್ವಶಕ್ತನಾದ ಅಲ್ಲಾಹನಿಗೆ ಅವುಗಳಲ್ಲಿ ಯಾವುದೂ ಅಗತ್ಯವಿಲ್ಲ.

**(ತಫ್ಸೀರ್ ಕಬೀರ್, ಸಂಪುಟ-6, ಪುಟ-81, ಪ್ರಕಟಿತ ಖಾದಿಯಾನ್ 2010)**

## ದಿವ್ಯದೂತರು (ಮಲಾಯಿಕ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ."

***(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 12)***

ತಂದೆಯ ಆಶೀರ್ವಾದ (ಪ್ರಾರ್ಥನೆಗಳಿಂದ) ದಿಂದ ಲಾಭಾನ್ವಿತರಾಗಿರಿ ಮತ್ತು ಅವರ ಶಾಪಗಳಿಂದ ಉಳಿದುಕೊಳ್ಳಿರಿ.

ವಿವಾಹನಂತರ ವಖ್ಫೇ ನೌ ಮಹಿಳೆಯ ಪ್ರಮುಖ ಕರ್ತವ್ಯವೇನೆಂದರೆ ತಮ್ಮ ಮಕ್ಕಳನ್ನು ಅಲ್ಲಾಹನೊಂದಿಗೆ ಸಂಬಂಧವಿರಿಸುವಂತಹ ರೀತಿಯಲ್ಲಿ ತರಬೇತಿ ನೀಡುವುದಾಗಿರಬೇಕು. ತಮ್ಮ ಹೊಸ ಪೀಳಿಗೆಯನ್ನು ಅಹ್ಮದಿಯತ್ತಿನ ಮೇಲೆ ದೃಢವಾಗಿ ನಿಲ್ಲುವಂತೆ ಮಾಡಬೇಕು ಮತ್ತು ಅಲ್ಲಾಹನೊಡನೆ ಅವರು ಸಂಬಂಧ ಹೊಂದುವಂತೆ ಮಾಡಬೇಕು.

**ಸಯ್ಯದ್‌ನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್ (ಅಬಿಅ) ರೊಡನೆ ಕೇಳಲಾದ ಪ್ರಮುಖ ಪ್ರಶ್ನೆಗಳ ವಿವೇಕಪೂರ್ಣ ಉತ್ತರಗಳು**

**ಸೂಚನೆ:–** ಸಯ್ಯದ್‌ನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ವಿವಿಧ ಸಂದರ್ಭಗಳಲ್ಲಿ ತನ್ನ ಪತ್ರಗಳಲ್ಲಿ ಮತ್ತು MTA ಯ ವಿವಿಧ ಕಾರ್ಯಕ್ರಮಗಳಲ್ಲಿ ಪ್ರಮುಕ ಸಮಸ್ಯೆಗಳ ಕುರಿತು ನೀಡಲಾದ ನಿರ್ದೇಶನಗಳು. ಅವುಗಳಲ್ಲಿ ಕೆಲವು ಓದುಗರ ಹಿತದೃಷ್ಟಿಯಿಂದ ಅಲ್–ಫಝ್ಲ್ International ನ ಕೃಪೆಯಿಂದ ಪ್ರಕಟಿಸಲಾಗುತ್ತದೆ.

*(ಭಾಗ–3)*

**ಪ್ರಶ್ನೆ: ನಝಾರತ್ ಇಸ್ಲಾಹ್ ವ ಇರ್ಷಾದ್ ಮರ್ಕಝಿಯ್ಯ ರಬ್ವಾ, ಹದೀಸು ಗ್ರಂಥಗಳಲ್ಲಿ ವರದಿಯಾದ ತಂದೆಯ ತನ್ನ ಸಂತಾನದ ಪ್ರತಿ ಮಾಡುವ ದುಆ ಅಥವಾ ಸಂತಾನದ ವಿರುದ್ಧ ಮಾಡುವ ಶಾಪ (ಬದ್. ದುಆ) ಸ್ವೀಕಾರಗೊಳ್ಳುವ ಕುರಿತು ಬಂದಿರುವ ವರದಿಗಳು ಮತ್ತು ಅದರ ಅರಬಿ ನಿಘಂಟಿನ ಪ್ರಕಾರ ವಿಶ್ಲೇಷಣೆ ಬಯಸಿ ಹುಝೂರ್ ಅನ್ವರ್ ಅವರ ಮಾರ್ಗದರ್ಶನ ಬಯಸಿದರು. ಅದರಲ್ಲಿ ಯಾವ ವರದಿಯನ್ನು ಮತ್ತು ಯಾವ ಭಾಷಾಂತರವನ್ನು ಒಪ್ಪಬೇಕು? ಹುಝೂರೆ ಅನ್ವರ್ ತನ್ನ ಪತ್ರ ದಿನಾಂಕ: 25 ಫೆಬ್ರವರಿ 2015 ರಲ್ಲಿ ಈ ಪ್ರಶ್ನೆಗೆ ಕೆಳಗಿನ ಉತ್ತರ ನೀಡಿದರು.**

**ಉತ್ತರ:** ತಂದೆಯು ತನ್ನ ಸಂತಾನಕ್ಕಾಗಿ ದುಆ" ಎಂದು ತರ್ಜುಮೆ ಮಾಡಿದರೂ ಹದೀಸಿನ ತಾತ್ಪರ್ಯ ಸ್ಪಷ್ಟಗೊಳ್ಳುತ್ತದೆ. ಆದರೆ ಹದೀಸು ಗ್ರಂಥಗಳಲ್ಲಿ ವರದಿಯಾದ ಎರಡು ರೀತಿಯ ಹದೀಸುಗಳ ಪ್ರಕಾರ ತಮ್ಮ ತಮ್ಮ ಸ್ಥಾನದಲ್ಲಿ ಸರಿಯಾಗಿವೆ. ಮತ್ತು ನಮಗೆ ಮಾರ್ಗದರ್ಶನವಾಗಿವೆ. ಎರಡು ಹದೀಸುಗಳನ್ನು ಮುಂದಿಟ್ಟು ನೋಡಿದರೆ ವಿಷಯ ಹೀಗಾಗವುದು. ಯಾವ ವ್ಯಕ್ತಿಯ ದುಆ ಸ್ವೀಕೃತಿ ಹೊಂದುವುದೋ ಅವನ ಶಾಪ (ಬದ್–ದುಆ) ಸಹ ಸ್ವೀಕೃತವಾಗುತ್ತದೆ. ಅಲ್ಲಾಹನು ದುಆ ಸ್ವೀಕರಿಸುವೆನು, ಶಾಪ ಸ್ವೀಕರಿಸುವುದಿಲ್ಲ ಎಂದೇನು ಹೇಳಿಲ್ಲ.

ತಂದೆಗೆ ಅಲ್ಲಾಹನು ಆ ಸ್ಥಾನವನ್ನು ನೀಡಿದ್ದಾನೆ, ಈ ನೆಲೆಯಲ್ಲಿ ಅಲ್ಲಾಹನು ಅವನ ಪ್ರಾರ್ಥನೆಗಳನ್ನು ಸಹ ಸ್ವೀಕರಿಸುತ್ತಾನೆ ಮತ್ತು ಶಾಪ ಸಹ ಸ್ವೀಕರಿಸುತ್ತಾನೆ. ಅದಕ್ಕಾಗಿಯೇ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ವಿಶೇಷವಾಗಿ ಉಲ್ಲೇಖಿಸಿದನು.

**ವ ಖಝಾ ರಬ್ಬುಕ ಅಲ್ಲಾ ತಅ್‌ಬುದು ಇಲ್ಲಾ ಇಯ್ಯಾಹು ವಬಿಲ್ ವಾಲಿದೈನಿ ಇಹ್ಸಾನ, ಇಮ್ಮಾ ಯಬ್ಲುಗನ್ನ ಇಂದಕಲ್ ಕಿಬರ ಅಹದುಹುಮಾ ಔ ಕಿಲಾಹುಮಾ ಫಲಾ ತಖುಲ್ಲಹುಮಾ ಉಫ್ಫ್ ವಲಾ ತನ್‌ಹರ್‌ಹುಮಾ ವ ಖುಲ್ಲಹುಮಾ ಖೌಲನ್ ಕರೀಮ. ವಖ್‌ಫಿಝ್ಲಹುಮಾ ಜನಾಹಝ್ಝುಲ್ಲಿ ಮಿನರ್ರಹ್‌ಮತಿ ವಖುರ್ ರಬ್ಬಿರ್ ಹಮ್‌ಹುಮಾ ಕಮಾ ರಬ್ಬಯ್ಯಾನಿ ಸಗೀರ. (ಬನೀ ಈಸ್ರಾಯಿಲ್–24–25).**

"ನಿನ್ನ ಪ್ರಭೂ ಆಜ್ಞಾಪಿಸುತ್ತಾನೆ: "ಅವನ (ಅಲ್ಲಾಹನ) ಹೊರತು ಬೇರೆ ಯಾರನ್ನು ಆರಾಧಿಸಬೇಡ. ಮಾತಪಿತರೊಡನೆ ಉತ್ತಮವಾಗಿ ವರ್ತಿಸು. ಅವರಲ್ಲಿ ಒಬ್ಬರು ಅಥವಾ ಇಬ್ಬರು ನಿನ್ನ ಬಳಿ ವೃದ್ಧಾಪ್ಯ ಪಡೆದರೆ, ನೀನು ಅವರೊಡನೆ ನಿಂದನೆಯ ಮಾತನ್ನು ಆಡಬಾರದು. ನೀನು ಅವರನ್ನು ಗದರಿಸಿ ಮಾತನಾಡಬಾರದು. ಅವರಿಬ್ಬರೊಡನೆ ನೀನು ಸೌಮ್ಯವಾಗಿಯೂ ಆದರದಿಂದಲೂ ಮಾತನಾಡು. ಕರುಣೆಯಿಂದ ಕಂಡಿದವನಾಗಿ ನೀನು ಅವರಿಗೆ ವಿನಯದ ಬಾಹು ತಗ್ಗಿಸಿಕೊಂಡು ಹಾಗೂ ನನ್ನ ಪ್ರಭೂ ಅವರೀರ್ವರೂ ನನ್ನ ಬಾಲ್ಯ ಕಾಲದಲ್ಲಿ ನನ್ನನ್ನು ಸಾಕಿ ಸಲಹಿದಂತೆ ನೀನು ಸಹ ಅವರಿಗೆ ಕರುಣೆದೋರು ಎಂದು ಪ್ರಾರ್ಥಿಸು."

ಅಂದ ಹಾಗೆ ಈ ಹದೀಸುಗಳಲ್ಲಿ ಹುಝೂರ್(ಸ) ನಮಗೆ ಉಪದೇಶಿಸಿದ್ದೇನೆಂದರೆ ತಂದೆಯ ದುಆ (ಪ್ರಾರ್ಥನೆಗಳಿಂದ) ಪ್ರಯೋಜನ ಪಡೆಯುತ್ತೀರಿ ಮತ್ತು ಅವರ ಶಾಪದಿಂದ ಉಳಿಯಿರಿ.

**ಪ್ರಶ್ನೆ:– ಗುಲ್ಶನ್ ವಕ್ಫೆ ನೌ ಲಜ್ನ, ನಾಸಿರಾತ್ ಮೆಲ್ಬೋರ್ನ್ (ಆಸ್ಟೇಲಿಯಾ) ದಿನಾಂಕ: 12 ಅಕ್ಟೋಬರ್ 2013 ರಲ್ಲಿ ಒರ್ವ ಬಾಲಕಿ ಹುಝೂರ್‌ರವರನ್ನು ಕೇಳಿದರು. ನಮಗೆ ಅಲ್ಲಾಹನು ಏಕೆ ಕಾಣುವುದಿಲ್ಲ? ಆಗ ಹುಝೂರ್ ಕೆಳಗಿನ ಉತ್ತರವನ್ನು ನೀಡಿದರು.**

**ಉತ್ತರ:** ಅಲ್ಲಾಹನು ನಮಗೆ ಕಾಣಲಾಗದಂತಹ ಅಸ್ತಿತ್ವ ಹೊಂದಿದ್ದಾನೆ. (ಹುಝೂರೆ ಅನ್ವರ್ ಪ್ರಶ್ನೆ ಕೇಳಿದ ಬಾಲಕಿಯನ್ನು ಸಂಬೋಧಿಸುತ್ತಾ ಮಾಳಿಗೆಯ ಮೇಲಿನ ಬಲ್ಬನ್ನು ತೋರಿಸುತ್ತಾ ಹೇಳಿದರು) ನಿಮಗೆ ಈ ಬಲ್ಬ್ ಕಾಣುತ್ತಿದೆ ಅಲ್ಲವೆ? ಮತ್ತು ಬಲ್ಬ್‌ನ ಪ್ರಕಾಶ (ಹುಝೂರೆ ಅನ್ವರ್ ತನ್ನ ಮುಂದೆ ಇದ್ದ ಮೇಜಿನ ಕಡೆ ಸಂಕೇತಿಸುತ್ತಾ ಹೇಳಿದರು) ಇಲ್ಲಿ ಬೀಳುತ್ತಿರುವುದನ್ನು ಕಾಣುತ್ತಿದೆಯೇ. ಇದು ಹೀಗೆ ನಡೆದುಕೊಂಡು ಬಂದಿದೆ? ಈ ಪ್ರಕಾರ ನಿಮಗೆ ಅಲ್ಲಿಂದ ಇಲ್ಲಿಯವರೆಗೆ ನಡೆಯುವುದನ್ನು ಕಾಣುತ್ತದೆಯೇ? (ಹುಝೂರೆ ಅನ್ವರ್ ಮತ್ತೊಮ್ಮೆ ಆ ಬಾಲಕಿಗೆ ಕೇಳಿದರು). ಅದು ಬಲ್ಬ್‌ನ ಪ್ರಕಾಶವಾಗಿದೆ. ಅದು ಬೆಳಗುತ್ತಿದೆ. ಮತ್ತು ಅದರ ಬೆಳಕು ಇಲ್ಲಿ ಅಂದರೆ ಮೇಜಿನ ಮೇಲೆ ಬಿದ್ದಿದೆ. ಆದರೆ ಅದರ ನಡುವೆ ಇರುವ ದೂರದಲ್ಲಿ ಯಾವ ವಸ್ತುವು ಕಾಣುತ್ತಿಲ್ಲ. ಅದು ಅಲ್ಲಿಂದ ಹೊರಟು ಇಲ್ಲಿ ತಲುಪಿದೆ. ಮಧ್ಯದಲ್ಲಿ ಕಾಣುತ್ತಿದೆಯೇ? (ಬಾಲಕಿ ಹೇಳಿದಳು ಕಾಣುತ್ತಿಲ್ಲ, ಆಗ ಹುಝೂರ್ ಹೇಳಿದರು) ಕಾಣುತಿಲ್ಲವಲ್ಲ? ಹಾಗಾದರೆ ಅಲ್ಲಾಹನಂತೂ ಅದಕ್ಕಿಂತ ಹೆಚ್ಚು ಪ್ರಕಾಶ ಹೊಂದಿದವನಾಗಿದ್ದಾನೆ. ಮತ್ತು ಆ ಪ್ರಕಾಶ ಎಂತಹ ಪ್ರಕಾಶವಾಗಿದೆ ಎಂದರೆ ಅದು ಕಾಣುವುದಿಲ್ಲ. ಹೌದು ಅಲ್ಲಾಹನ ಶಕ್ತಿ ಸಾಮರ್ಥ್ಯಗಳು ಕಾಣುತ್ತಿವೆ. ನೀವು ದುಆ ಮಾಡಿರಿ, ನಿಮ್ಮ ದುಆ ಎಂದಾದರೂ ಸ್ವೀಕೃತಗೊಂಡಿದೆಯೇ? ಬಾಲಕಿ ಹೇಳಿದಳು, ಹೌದು ಸ್ವೀಕೃತಗೊಂಡಿದೆ. ಹುಝೂರ್ ಹೇಳಿದರು ಅಂದ ಹಾಗೆ ಅದೇ ಅಲ್ಲಾಹನನ್ನು ಕಂಡ ಹಾಗೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ. ಭೂಮಿಯು ಒಂದು **Planet** ಗ್ರಹ ಆಗಿದೆ, ಭೂಮಂಡಲವಾಗಿದೆ, ಮತ್ತೆ ಇಲ್ಲಿ ಸೃಷ್ಟಿಯಿದೆ. ಸಸ್ಯಗಳಿವೆ, **Vegetation** ಯಿದೆ. ಆಸ್ಟ್ರೇಲಿಯಾ ಅಂತೂ **Flora & Fauna** ಗೋಸ್ಕರ ಪ್ರಸಿದ್ಧ ಸ್ಥಳ ಎನ್ನಲಾಗುತ್ತದೆ. ಇವೆಲ್ಲರ ಸೃಷ್ಟಿಕರ್ತ ಅಲ್ಲಾಹನಾಗಿದ್ದಾನೆ. ಎಲ್ಲ ವಸ್ತುಗಳನ್ನು ವೀಕ್ಷಿಸಿರಿ. ಒಂದು plant (ಸಸ್ಯ) ಇಲ್ಲಿ ಬೆಳೆಯುತ್ತದೆ. ಹಾಗೆಯೇ ಹೇಳುತ್ತಾರೆ. Plant ಗೆ ಎಲೆಗಳಿರದಿದ್ದರೆ Cholorophyll ಆ plantಗೋಸ್ಕರ ಜೀವನ ಒದಗಿಸುತ್ತದೆ. ಎಲೆಗಳು ಅದರಲ್ಲಿ ತಮ್ಮ ಪಾತ್ರ ವಹಿಸುತ್ತವೆ. ಆದರೆ ನಾನು ಇಲ್ಲಿ ಇಂತಹ ಸಸ್ಯಗಳು ಕಂಡಿದ್ದೇನೆ. ಅದು ಕೇವಲ ಒಂದು **stick ಮತ್ತು stem** ಆಗಿವೆ. ಅವೇ ಎಲೆಗಳ ಪಾತ್ರ ಸಹ ನಿರ್ವಹಿಸುತ್ತಿವೆ. ಅದರ ಶಿರದ ಮೇಲೆ ಒಂದು ಸುಂದರವಾದ ದೊಡ್ಡ ಬಣ್ಣ ಬಣ್ಣದ (colourful) ರೀತಿಯ ಪುಷ್ಪವಿದೆ. ಇದು ಸಹ ಒಂದು ಅಲ್ಲಾಹನ ಕಾರ್ಯವಾಗಿದೆ. ಎಲ್ಲಾ ವಸ್ತುಗಳನ್ನು ಅಲ್ಲಾಹನೇ ಸೃಷ್ಟಿಸಿದ್ದಾನೆ. ಅದನ್ನು ನೋಡಿರಿ, ಯೋಚಿಸಿರಿ ಆಗ ಅಲ್ಲೇ ಅಲ್ಲಾಹನು ನಿಮಗೆ ಕಾಣುವನು.

**ಪ್ರಶ್ನೆ: ಗುಲ್ಶನ್ ವಖ್ಫೆ ನೌ ಲಜ್ನ, ನಾಸಿರಾತ್ ಮೆಲ್ಬೋರ್ನ್ ಆಸ್ಟ್ರೇಲಿಯಾ ದಿನಾಂಕ: 12 ಅಕ್ಟೋಬರ್ 2013 ರಂದು ಲಜ್ನಾ ಇಮಾಉಲ್ಲಾದ ಸದಸ್ಯೆಯೊಬ್ಬರು ಹುಝೂರರೊಡನೆ ಕೇಳಿದರು. ವಾಖಿಫಾತೆ ಲಜ್ನಾ ಒಬ್ಬಳು ವಿವಾಹವಾಗಿ ಮನೆಗೆ ಬಂದರೆ, ಕುಟುಂಬ ಮತ್ತು ಮಕ್ಕಳ ಹೊಣೆಗಾರಿಕೆ ಬಿದ್ದರೆ ಆ ಸಮಯ ನಾವು ವಾಖಿಫಾತೆ ನೌ ಆಗುವ ಪಾತ್ರ ಹೇಗೆ ನಿಭಾಯಿಸಬಹುದು? ಹುಝೂರೆ ಅನ್ವರ್ ಅದರ ಉತ್ತರ ಈ ಕೆಳಗಿನಂತೆ ನೀಡಿದರು.**

ಉತ್ತರ:– ವಖ್ಫೆ ನೌ ನ ಸರಿಯಾದ ಪಾತ್ರ ಪಾಲಿಸಲು ಮೊದಲು ಐದು ಹೊತ್ತಿನ ನಮಾಝುಗಳನ್ನು ಸರಿಯಾಗಿ ನಿರ್ವಹಿಸಿರಿ. ತಹಜ್ಜುದ್ ನಿರ್ವಹಿಸಬಹುದಾದರೆ ನಿರ್ವಹಿಸಿರಿ. ಪವಿತ್ರ ಖುರ್‌ಆನ್ ಪಠಿಸಿರಿ. ಅದರ ತರ್ಜುಮೆ ಓದಿರಿ. ಲಜ್ನಾದ ಯಾವುದೇ ಕಾರ್ಯ ನಿಮ್ಮ ಪಾಲಿಗೆ ಬಂದರೆ ಸಾಧ್ಯವಾದಷ್ಟು ಮಟ್ಟಿಗೆ ಮಾಡಿರಿ. ಮತ್ತೆ ಎಲ್ಲದಕ್ಕಿಂತ ಮುಖ್ಯ ಕರ್ತವ್ಯವೆಂದರೆ ಮಕ್ಕಳ ತರಬೇತಿಯಾಗಿದೆ. ಅವರಿಗೆ ಅಲ್ಲಾಹನೊಂದಿಗೆ ಸಂಬಂಧ ಕಲ್ಪಿಸುವ ರೀತಿಯಲ್ಲಿ ತರಬೇತಿ ನೀಡಿರಿ. ಪತಿಗೆ ಮನವರಿಕೆ ಮಾಡಿಕೊಡಿ. ನಾನು ವಖ್ಫೆ ನೌ ಆಗಿರುತ್ತೇನೆ. ನನ್ನ ಕೆಲಸವೇನೆಂದರೆ ತನ್ನನ್ನು ತರಬೇತುಪಡಿಸುವುದು, ತನ್ನ ಮನೆಯ ತರಬೇತಿ ನಿರ್ವಹಿಸುವುದು ಮತ್ತು ತನ್ನ ಮಕ್ಕಳನ್ನು ತರಬೇತಿಗೊಳಿಸುವುದು. ಆದುದರಿಂದ ನೀವು ನನ್ನ ಈ ಕಾರ್ಯದಲ್ಲಿ ನೆರವು ನೀಡಿರಿ. ಏಕೆಂದರೆ ತಂದೆಯಾದವನು ತನ್ನ ಪಾತ್ರ ವಹಿಸಲಿಲ್ಲ ಎಂದಾದರೆ ತರಬೇತಿ ಸರಿ ಆಗಲಾರದು. ಪ್ರಮುಖ ಜವಾಬ್ದಾರಿಯು ಮನೆಯ ಜವಾಬ್ದಾರಿಯಾಗಿದೆ. ನಿಮಗೂ ಅದರಲ್ಲಿ ಬಹಳ

ಪುಣ್ಯವಿದೆ. ಹದೀಸಿನಲ್ಲಿ ಬರುತ್ತದೆ. ಮಹಿಳೆಯೊಬ್ಬಳು ಹಝ್ರತ್ ರಸೂಲುಲ್ಲಾಹ್(ಸ) ರವರ ಬಳಿಗೆ ಬಂದು ಹೇಳಿದಳು. ನನ್ನ ಪತಿ ಜಿಹಾದಿಗೆ ಹೋಗುತ್ತಾರೆ, ಸಂಪಾದಿಸುತ್ತಾರೆ ಮತ್ತು ಚಂದಾ ಸಹ ಕೊಡುತ್ತಾರೆ, ಪುರುಷರು ಮಾಡುವಂತಹ ಕಾರ್ಯಗಳು ನಾವು ಮನೆಗಳಲ್ಲಿರುವ ಸ್ತ್ರೀಯರು ಮಾಡಲು ಸಾಧ್ಯವಾಗುವುದಿಲ್ಲ. ಹಾಗಾದರೆ ಜಿಹಾದ್ ಮತ್ತು ಚಂದಾ ನೀಡುವ ಪುಣ್ಯ ನಮಗೆ ದೊರೆಯಬಹುದೇ? ಹಝ್ರತ್ ರಸೂಲುಲ್ಲಾಹ್(ಸ) ನುಡಿದರು. ಹೌದು ಏಕೆಂದರೆ ನೀವು ಅವರ ಮನೆಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತೀರಿ. ಅವರ ಮಕ್ಕಳನ್ನು ತರಬೇತಿ ನೀಡುತ್ತೀರಿ. ಅವರು ಹೋದ ಮೇಲೆ ನೀವು ಮನೆಯ ಉಸ್ತುವಾರಿಯನ್ನು ವಹಿಸಿಕೊಳ್ಳುತ್ತೀರಿ. ಮತ್ತು ಈ ಕಾರಣಗಳಿಂದ ಒಳ್ಳೆಯ ಸಂತಾನವನ್ನು ಜನ್ಮ ನೀಡುತ್ತೀರಿ. ಆದುದರಿಂದ ನಿಮಗೂ ಅವರಷ್ಟೇ ಪುಣ್ಯ ದೊರೆಯುವುದು. ಅಲ್ಲದೆ, ಅವರನ್ನು ಹೊರಗೆ ಹೋಗಿ ಧರ್ಮ ಸೇವೆ ಮಾಡಲು ಕಳುಹಿಸುತ್ತೀರಿ. ಧರ್ಮ ಸೇವೆ ಮಾಡದಿದ್ದರೂ ಹದೀಸಿನಲ್ಲಿ ಹೀಗೂ ಇದೆ. ಮಹಿಳೆಯರು ತಮ್ಮ ಮನೆಯ ಉಸ್ತುವಾರಿ ವಹಿಸಿರುತ್ತಾರೆ. ಹೀಗೆ ವಖ್ಫೆ ನೌ ಅವರ ಜವಾಬ್ದಾರಿಯು ತನ್ನ ಹೊಸ ಪೀಳಿಗೆಯನ್ನು ಅಹ್ಮದಿಯತ್ತಿನ ಮೇಲೆ ಸ್ಥಿರವಾಗಿರುವಂತೆ ಮತ್ತು ಅಲ್ಲಾಹನೊಡನೆ ಅವರ ಸಂಬಂಧ ಜೋಡಿಸುವುದಾಗಿದೆ.

**ಪ್ರಶ್ನೆ: ಗುಲ್ಮನ್ ವಖ್ಫೆ ನೌ ಲಜ್ನಾ, ನಾಸಿರಾತ್ ಸಿಡ್ನಿ ಆಸ್ಟ್ರೇಲಿಯಾ ದಿನಾಂಕ: 07, ಅಕ್ಟೋಬರ್ 2013 ರಲ್ಲಿ ಬಾಲಕಿಯೊಬ್ಬಳು ಹುಝೂರರೊಡನೆ ಕೇಳಿದಳು. ಜನರು ಇಸ್ಲಾಮ್ ಧರ್ಮವನ್ನು ಭಯೋತ್ಪಾದನೆಯೊಂದಿಗೆ ಏಕೆ ಜೋಡಿಸುತ್ತಾರೆ?**

ಹುಝೂರ್(ಅತಬಅ) ಅದಕ್ಕೆ ಈ ಕೆಳಗಿನ ಉತ್ತರವನ್ನು ನೀಡಿದರು.

**ಉತ್ತರ**: ಏಕೆಂದರೆ ಇಂದು ಭಯೋತ್ಪಾದಕರ ಎಷ್ಟೆಲ್ಲಾ ಸಂಘಟನೆಗಳಿವೆ. ಉದಾಹರಣೆಗೆ ಅಲ್-ಖಾಯಿದಾ, ತಾಲಿಬಾನ್, ಬೋಕೋ ಹರಾಮ್ ಮತ್ತು ಇಲ್ಲಿ ಉತ್ಪತ್ತಿಯಾಗುವ ಹೊಸ ಹೊಸ ಸಂಘಟನೆಗಳಲ್ಲಿ ಮುಸ್ಲಿಮರಿಗೆ ಸೇರಿದ ಸಂಘಟನೆಗಳು ಹೆಚ್ಚಾಗಿವೆ. ಆದುದರಿಂದ ಜನರು ಭಾವಿಸುತ್ತಾರೆ. ಬಹುಶಃ ಇಸ್ಲಾಂ ಧರ್ಮ ಮತ್ತು ಭಯೋತ್ಪಾದನೆ ಒಂದೇ ಆಗಿದೆ ಎಂದು. ಅದೇ ತಪ್ಪು ಕಲ್ಪನೆಯನ್ನು ನಾವು ಅಳಿಸಿ ಹಾಕಬೇಕಾಗಿದೆ. ಅದೇ ಕಾರಣ ಇಲ್ಲಿ Block stall ನಲ್ಲಿ Pathway to peace ಗ್ರಂಥ ಇಡಲಾಗಿದೆ. ಅದರಲ್ಲಿ ನನ್ನ ವಿಭಿನ್ನ ಭಾಷಣಗಳಿವೆ, ಅದು ವಿವಿಧ ಸಂದರ್ಭಗಳಲ್ಲಿ ಮಾಡಿದ್ದಾಗಿವೆ. ಇಸ್ಲಾಂ ಮತ್ತು ಭಯೋತ್ಪಾದನೆಗೆ ತಾಳ ಹಾಕುವುದು ಬೇಡ. ಇವು ಪ್ರತ್ಯೇಕ ವಸ್ತುಗಳಾಗಿವೆ. ಅವು ಅವರ ನಕಾರಾತ್ಮಕ ಚಿಂತನೆಯಾಗಿವೆ. ಆ ಗ್ರಂಥವನ್ನು ಖರೀದಿಸಿರಿ. (ಹುಝೂರ್ ಈ ಗ್ರಂಥದ ಬೆಲೆಯ ಕುರಿತು ಅದು ಇಲ್ಲಿ ಬಹುಶಃ ಹೆಚ್ಚಿನ ಬೆಲೆಯಲ್ಲಿ ಮಾರುತ್ತಿದ್ದಾರೆ, ಅದನ್ನು ಎರಡು ಡಾಲರ್‌ಗಳಲ್ಲಿ ಮಾರಬೇಕು, ಐದು ಡಾಲರ್‌ಗಳಲ್ಲಿ ಮಾರುತ್ತಿದ್ದಾರೆ ಎಂದು ಕೇಳಿ ಬಂದಿದೆ. ವಾಖಿಫೆ ನೌ ಅವರಿಗಂತೂ ಎರಡು ಡಾಲರ್‌ಗಳಲ್ಲಿಯೇ ಮಾರಬೇಕಾಗಿದೆ.) ಅದನ್ನು ಖರೀದಿಸಿರಿ ಮತ್ತು ಓದಿರಿ. ಅದರಲ್ಲಿ ನಿಮಗೆ ನೀವು ಬರೆದ ಎಲ್ಲದಕ್ಕೂ ಉತ್ತರ ದೊರೆಯುವುವು. ಇದು ತಪ್ಪು ಕಲ್ಪನೆಯಾಗಿದೆ. ಇಸ್ಲಾಂ ತುಂಬಾ ಸುಂದರ ಶಿಕ್ಷಣ ಹೊಂದಿದೆ. ಇಸ್ಲಾಂ ಎಂದೂ ಸಹ ಯುದ್ಧಗಳಿಗೆ ಖುದ್ದಾಗಿ ಮುಂದಾಗಲಿಲ್ಲ ಭಯೋತ್ಪಾದನೆಯೂ ಎಸಗಲಿಲ್ಲ. ಮಕ್ಕ ವಿಜಯ ಸಾಧಿಸಿದಾಗ ಹಝ್ರತ್ ರಸೂಲುಲ್ಲಾಹ್(ಸ) ಎಲ್ಲರಿಗೂ ಕ್ಷಮೆ ನೀಡಿದರು. ತನ್ನ ಶತ್ರುಗಳಿಗೂ ಸಹ ಕ್ಷಮಿಸಿದರು. ಪವಿತ್ರ ಖುರ್‌ಆನ್ ಹೇಳುತ್ತದೆ. ಯಾರಿಗೂ ಸಹ ವಿನಾಕಾರಣ ಹತ್ಯೆ ಮಾಡಬೇಡಿರಿ. ಒಬ್ಬನ ಹತ್ಯೆ ಮಾಡಿದರೆ ಅದರ ತಾತ್ಪರ್ಯ ಇಡೀ ಮಾನವ ಕುಲದ ಹತ್ಯೆ ಮಾಡಿದಂತೆ. ಈ ಮುಸಲ್ಮಾನರೆಂಬುವವರು ಯಾರ ಹತ್ಯೆ ಮಾಡುತ್ತಿದ್ದಾರೆ? ಕ್ರೈಸ್ತರ ಹತ್ಯೆ ಮಾಡುತ್ತಿಲ್ಲ. ಮುಸಲ್ಮಾನರಿಗೆ ಮುಸಲ್ಮಾನರೇ ಹೆಚ್ಚು ಹತ್ಯೆ ಮಾಡುತ್ತಿದ್ದಾರೆ. ಪಾಕಿಸ್ತಾನದಲ್ಲಿ ದಿನ ನಿತ್ಯ ಆಗುತ್ತಿರುವ ಹಲ್ಲೆಗಳು, ಇರಾಖಿನಲ್ಲಿ ಶಿಯಾ ಅವರ ಹತ್ಯೆ ಮಾಡುತ್ತಿದ್ದಾರೆ ಅಥವಾ ಶಿಯಾದವರು ಸುನ್ನಿಗಳ ಹತ್ಯೆ ಮಾಡುತ್ತಿದ್ದಾರೆ ಅಥವಾ ಸರ್ವತ್ರ Suicide Bombing (ಆತ್ಮಹತ್ಯೆ ಬಾಂಬಿಂಗ್) ಆಗುತ್ತಿವೆ. ಮುಸಲ್ಮಾನರೇ ಸಾಯುತ್ತಿದ್ದಾರೆ. ಚರ್ಚಿನ ಮೇಲೆ ಈಗ ಆಕ್ರಮಣ ಆಗಿದೆ. ಅದರಲ್ಲಿ ನೂರು, ಇನ್ನೂರು ಕ್ರೈಸ್ತರು ಹತರಾಗಿದ್ದಾರೆ. ಆದರೆ ಉಳಿದದ್ದು ಮುಸಲ್ಮಾನರೇ ಹತ್ಯೆ ಮಾಡುತ್ತಿದ್ದಾರೆ. ಅಹ್ಮದಿಯರ ಹತ್ಯೆ ಮಾಡುತ್ತಿದ್ದಾರೆ. ಅಥವಾ ಇತರ ಬಾಂಬ್ ಹಾಕುತ್ತಿದ್ದಾರೆ. ಇವೆಲ್ಲ ಭಯೋತ್ಪಾದನೆಯೇ ಆಗಿವೆ. ಒಬ್ಬರು ಮತ್ತೊಬ್ಬರನ್ನು ಕೊಲ್ಲುತ್ತಿದ್ದಾರೆ. ಅದಕ್ಕೆ ಎಲ್ಲೂ ಅನುಮತಿ ಇಲ್ಲ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿದನು. ನೀವು ಪರಸ್ಪರ ಅತ್ಯಂತ ಕರುಣೆದೋರುವವರಾಗಿರಿ. ಇವರೆಂದರೆ ಮುಸಲ್ಮಾನರೇ ಕೊಲ್ಲುತ್ತಿದ್ದಾರೆ. ಒಬ್ಬ ಮುಸಲ್ಮಾನನಿಗೆ ಕಾರಣವಿಲ್ಲದೆ ಹತ್ಯೆ ಮಾಡುವುದೆಂದರೆ, ಅಲ್ಲಾಹನು ಅವರನ್ನು ನರಕಕ್ಕೆ ಹಾಕುವೆನು ಎಂದು ಹೇಳಿರುವನು. ಅಂದರೆ ಇವರೆಲ್ಲ ಈ ನರಕವಾಸಿಗಳಾಗುತ್ತಿದ್ದಾರೆ. ಅಂತೂ ಇಸ್ಲಾಮ್ ಧರ್ಮಕ್ಕೆ ಮತ್ತು ಭಯೋತ್ಪಾದನೆಗೆ ಯಾವ ಸಂಬಂಧವೂ ಇಲ್ಲ. ಇಸ್ಲಾಮ್ ಪದವನ್ನೇ ನೋಡಿಕೊಳ್ಳಿ ಅದರರ್ಥ ಶಾಂತಿ ಎಂದಾಗಿದೆ. ನೀವು MTA ನೋಡುವವರಾಗಿದ್ದರೆ, ಕನಿಷ್ಠ ವಾಖಿಫೀನೆ ನೌ ಅವರು ಅವಶ್ಯವಾಗಿ ಕೇಳಲೇಬೇಕಾಗಿದೆ. ಯು.ಕೆ ಜಲ್ಸಾದ ನನ್ನ ಅಂತಿಮ ಭಾಷಣದಲ್ಲಿ–ಇಸ್ಲಾಂ ಎಂದರೇನು, ಮುಸಲ್ಮಾನರೆಂದರೆ ಯಾರು, ವಿಷಯವೇ ಆಧಾರವಾಗಿತ್ತು. ಹಾಗಾಗಿ ಈ ಗ್ರಂಥವನ್ನು ಖರೀದಿಸಿ ಓದಿರಿ. ಅದು ಇಂಗ್ಲೀಷ್‌ನಲ್ಲಿದೆ. ನೀವು ಓದಬಹುದು.

**(ಸಂಕಲನ ಝುಹೀರ್ ಅಹ್ಮದ್ ಖಾನ್, ರಿಕಾರ್ಡ್ ವಿಭಾಗ, ದಫ್ತರ್ ಪ್ರೈವೇಟ್ ಸೆಕ್ರೇಟರಿ ಲಂಡನ್)**

**ಕೃಪೆ : ಅಲ್-ಫಝ್ಲ್ International (4 ಡಿಸೆಂಬರ್ 2020)**

------------*****------------

## ವಿವಾಹ ಪ್ರಚಾರಪಡಿಸಲು ದಫ್ ಉಪಯೋಗಿಸಬಹುದು ಹೊರತು ಡೋಲು ಬಾರಿಸುತ್ತಾ ಕುಣಿಯುವುದು ನಿಷಿದ್ಧವಾಗಿದೆ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಟ್ಟ ವಸ್ತುಗಳು ಹರಾಮ್ ಆಗಿದೆ ಮತ್ತು ಶುದ್ಧ ವಸ್ತುಗಳು ಹಲಾಲ್ ಆಗಿದೆ. ಅಲ್ಲಾಹನು ಯಾವುದೇ ಶುದ್ಧ ವಸ್ತುಗಳನ್ನು ನಿಷಿದ್ಧ (ಹರಾಮ್) ಗೊಳಿಸುವುದಿಲ್ಲ. ಬದಲು ಎಲ್ಲ ಶುದ್ಧ ವಸ್ತುಗಳು ಹಲಾಲ್ (ಧರ್ಮಬದ್ಧ) ಎನ್ನುತ್ತದೆ. ಆದರೆ ಶುದ್ಧ ವಸ್ತುಗಳೊಂದಿಗೆ ಅಶುದ್ಧ ವಸ್ತುಗಳನ್ನು ಬೆರಕೆ ಮಾಡಿದರೆ ಅದು ನಿಷಿದ್ಧವಾಗುತ್ತದೆ, ಈಗ ನೋಡಿ ವಿವಾಹವನ್ನು ಪ್ರಚಾರಪಡಿಸಲು ದಫ್ ಬಾರಿಸುವುದನ್ನು ಧರ್ಮಸಮ್ಮತವೆಂದಿದೆ. ಆದರೆ ಅದರಲ್ಲಿ ಡೋಲು ಬಾರಿಸುತ್ತಾ ಕುಣಿಯುವುದು ಇತ್ಯಾದಿ ಸೇರಿಸುವುದನ್ನು ನಿಷಿದ್ಧಗೊಳಿಸಲಾಗಿದೆ. ಆದರೆ ನಬಿ ಕರೀಂ ಸಲ್ಲಲ್ಲಾಹು ಅಲೈಹಿವಸಲ್ಲಮರ ರೀತಿಯನ್ನು ಅನುಸರಿಸಿದರೆ ಯಾವುದೂ ನಿಷಿದ್ಧವಲ್ಲ. **(ಮಲ್‌ಫೂಝಾತ್, ಸಂಪುಟ–5, ಪುಟ–354, ಮುದ್ರಣ ಖಾದಿಯಾನ್ 2003)**

## ವಿವಾಹ ಸಂದರ್ಭದಲ್ಲಿ ನಿಷ್ಪ್ರಯೋಜಕ ಸಂಗೀತ, ಕುಣಿತ ಹಾಗೂ ಹಾಡುಗಳನ್ನು ಹಾಡಲು ಅನುಮತಿ ಇಲ್ಲ.

ಹಝ್ರತ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್ (ಅತಬಅ) ಹೇಳುತ್ತಾರೆ: "ಸಂತೋಷದ ಸಂದರ್ಭಗಳಲ್ಲಿ ಅಲ್ಲಾಹನ ಅನುಗ್ರಹಗಳನ್ನು ಬೇಡುವ ವಿವಾಹವನ್ನು ಅಲ್ಲಾಹನು ಎಲ್ಲಾ ರೀತಿಯಿಂದ ಯಶಸ್ವಿಗೊಳಿಸಲಿ. ಬರುವ ಪೀಳಿಗೆ ಇಸ್ಲಾಮ್ ಧರ್ಮದ ಸೇವಕರಾಗಿರಲಿ, ಅಲ್ಲಾಹನ ವಿಧೇಯ ದಾಸರಾಗಿರಲಿ ಎನ್ನುವ ಬದಲು ಅಜಾಗೃತಗೊಂಡು ಹಾಡುಗಳನ್ನು ಹಾಡುತ್ತ ಶಿರ್ಕ್ (ಬಹು ದೇವಾರಾಧನೆ) ಮಾಡುವವರಾಗಿರುತ್ತಾರೆ. ದೂರುಗಳು ಬರುತ್ತಿರುತ್ತವೆ ಆದುದರಿಂದ ಇಂತಹ ಮನೆಯವರಿಗೆ ನಾನು ಎಚ್ಚರಿಕೆ ನೀಡುತ್ತೇನೆ, ಈ ರೀತಿಯ ನಿಷ್ಪ್ರಯೋಜಕ ಹಾಗೂ ನಿರರ್ಥಕತೆಯಿಂದ ದೂರವಿರಬೇಕು, ಹೀಗೆಯೇ ಡ್ಯಾನ್ಸ್ ಕುಣಿತಗಳಿಂದ, ವಧುವಿನ ಮನೆಯಲ್ಲಿ ನಾನಾ ರೀತಿಯ ಶೃಂಗಾರಗಳು ಅಥವಾ ವಿವಾಹ ನಂತರ ವಧು ವಿವಾಹವಾಗಿ ವರನ ಮನೆಗೆ ಹೋದಾಗ ಅಲ್ಲಿ ಕೆಲವು ಸಂದರ್ಭಗಳಲ್ಲಿ ನಿಷ್ಪ್ರಯೋಜಕ ರೀತಿಯ ಸಂಗೀತ ಅಥವಾ ಹಾಡುಗಳಿಗೆ ಕುಣಿಯುತ್ತಾರೆ, ಇದಕ್ಕೆ ಯಾವ ಕಾರಣಕ್ಕೂ ಅನುಮತಿ ನೀಡಲಾಗುವುದಿಲ್ಲ." **(ಖುತ್‌ಬಾತೆ ಮಸ್‌ರೂರ್, ಸಂಪುಟ–3, ಪುಟ–687)**

## ಅಂತಿಮ ವಿಜಯ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಪ್ರಾಯಶಃ ಕೊನೆಗೆ ಕ್ರೈಸ್ತ ಧರ್ಮ ಲೋಕದಾದ್ಯಂತ ವ್ಯಾಪಿಸುವುದೆಂದು ಅಥವಾ ಬೌದ್ಧ ಧರ್ಮ ಲೋಕವನ್ನೆಲ್ಲ ಆವರಿಸುವುದೆಂದು ಭೂಲೋಕದ ಜನರು ಆಲೋಚಿಸುತ್ತಿರಬಹುದು. ಆದರೆ ಅವರ ಈ ಯೋಚನೆ ತಪ್ಪಾಗಿದೆ. ಆಕಾಶದಲ್ಲಿ ದೇವನಿಂದ ನಿರ್ಧರಿಸಲ್ಪಡುವವರೆಗೆ ಯಾವುದೇ ಕಾರ್ಯವು ಭೂಮಿಯಲ್ಲಿ ಸಂಭವಿಸಲಾರದು. ಅಂತಿಮವಾಗಿ ಇಸ್ಲಾಮ್ ಧರ್ಮ ಜನರ ಹೃದಯಗಳನ್ನು ಜಯಿಸುವುದು ಎಂದು ಆಕಾಶ ಭೂಮಿಗಳ ಅಧಿಪತಿಯಾದ ದೇವನು ನನಗೆ ತಿಳಿಸಿರುವನು. **(ಬರಾಹೀನೆ ಅಹ್ಮದಿಯಾ, ಭಾಗ 5; ರೂಹಾನೀ ಖಝಾಇನ್ ಸಂಪುಟ 21, ಪುಟ 427)**

**Love for All, Hatred for None**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಹೇಳಿದರು. ಬಹುಶಃ ನೀವು ನನ್ನ ಮರಣವನ್ನು ಬಯಸುವವರಾಗುವಿರಿ. ಆದರೆ ಎಲ್ಲಿಯವರೆಗೆ ಎರಡು ಮಾತುಗಳಲ್ಲಿ ಒಂದನ್ನು ಪೂರ್ಣಗೊಳ್ಳುವುದಿಲ್ಲ. ಅಲ್ಲಿಯವರೆಗೆ ನಾನು ಮರಣ ಇಚ್ಛಿಸುವುದಿಲ್ಲ. ಆ ಎರಡು ಮಾತುಗಳಾವುವು. ಒಂದು ನೀವು ಶಹೀದ್ (ಹುತಾತ್ಮ) ರಾಗಿರಿ. ಇಲ್ಲ ನಾನು ಸಹಿಸಿಕೊಳ್ಳುತ್ತೇನೆ ಅಥವಾ ವಿಜಯವನ್ನು ಪಡೆಯಿರಿ. ಆಗ ನನ್ನ ಕಣ್ಣುಗಳಿಗೆ ತಂಪು ದೊರೆಯುವುದು. ಆದ್ದರಿಂದ ಅವರು ಶಹೀದರಾದಾಗ ಹಜ್ಜಾ ಜನರು ಅವರಿಗೆ ಶಿಲುಬೆಗೆ ಏರಿಸಿದರು, ಹಝ್ರತ್ ಅಸ್ಮಾ(ರ) ವೃದ್ಧ ಅವಸ್ಥೆಯಲ್ಲಿದ್ದರೂ ಈ ದಾರುಣ್ಯ ಅವಸ್ಥೆ ಕಾಣಲು ಬಂದರು, ಬಂದು ರೋಧಿಸುವ ಬದಲು ಹಜ್ಜಾಜ್ ಅವರಿಗೆ ಸಂಬೋಧಿಸಿ ಹೇಳಿದರು. ಈ ಸವಾರನಿಗೆ ತಮ್ಮ ಕುದುರೆಯಿಂದ ಇಳಿಯುವ ಕಾಲ ಇನ್ನು ಬಂದಿಲ್ಲವೇ, ಹೀಗೆ ತುಂಬಾ ಸಾಹಸದಿಂದ ಅವರನ್ನು ಹೊಗಳಿದರು.

ಹಝ್ರತ್ ಪೈಗಂಬರ್[ಸ] ರವರ ರಕ್ಷಣೆಗೋಸ್ಕರ ಹಿಂಸೆಯನ್ನು ಸಹಿಸುವ ಇನ್ನೊಂದು ಘಟನೆ ಹೀಗೆ ದೊರೆಯುತ್ತದೆ. ಇಬ್ನು ಇಸ್‌ಹಾಖ್ ಹೇಳುತ್ತಾರೆ. ನನಗೆ ಅಸ್ಮಾ ಬಿನ್ತ್ ಅಬೂಬಕರ್‌ಯಿಂದ ವರದಿ ತಲುಪಿದೆ. ಅವರು ಹೇಳುತ್ತಾರೆ. ರಸೂಲುಲ್ಲಾಹ್(ಸ) ಮತ್ತು ಅಬೂಬಕರ್ ವಲಸೆ ಹೊರಟಿರುವಾಗ ಒಂದು ತಂಡ ನನ್ನ ಬಳಿ ಬಂತು. ಅವರಲ್ಲಿ ಅಬುಜಹಲನು ಇದ್ದನು. ಬಂದು ಅಬೂಬಕರ್ ಬಾಗಿಲು ಮುಂದೆ ನಿಂತರು, ನಾನು ಅವರತ್ತ ಹೋದಾಗ ಅವನು ಹೇಳಿದನು. ಓ ಅಬೂಬಕರ್‌ನ ಮಗಳೇ ನಿನ್ನ ತಂದೆ ಎಲ್ಲಿದ್ದಾನೆ. ನಾನು ಹೇಳಿದೆ. ಅವರು ಎಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆಗ ಅಬುಜಹಲ್ ತನ್ನ ಕೈಯನ್ನು ಎತ್ತಿ ಎಷ್ಟು ರಭಸದಿಂದ ನನ್ನ ಕಪಾಳಕ್ಕೆ ಹೊಡೆದನೆಂದರೆ ನನ್ನ ಕಿವಿಯಲ್ಲಿರುವ ಆಭರಣ ಕೆಳಗೆ ಬಿತ್ತು. ಕಿವಿಗೂ ಗಾಯವಾಯಿತು.

ಓರ್ವ ಮಹಿಳೆ ಮತ್ತು ಅವನ ಪುತ್ರನನ್ನು ಮತ್ತು ಅವನ ಗಂಡನನ್ನು ಬೇರ್ಪಡಿಸಿ ಹಿಂಸಿಸಿದ ಘಟನೆ ಇತಿಹಾಸದಲ್ಲಿ ಹೀಗೆ ದೊರೆಯುತ್ತದೆ.

ಹಝ್ರತ್ ಉಮ್ಮೇ ಸಲ್ಮಾ(ರ) ಹೇಳುತ್ತಾರೆ: ಅಬು ಸಲ್ಮಾ ಮದೀನಕ್ಕೆ ವಲಸೆ ಹೋಗಲು ತಯಾರಿ ಮಾಡಲು ಒಂದು ಒಂಟೆಯನ್ನು ವ್ಯವಸ್ಥೆ ಮಾಡಿಕೊಂಡರು, ನನಗೆ ಮತ್ತು ನನ್ನ ಮಗ ಸಲ್ಮಾ ನನ್ನ ಅದರ ಮೇಲೆ ಸವಾರನಾಗಿ ಮಾಡಿ ಅದರ ಲಗಾಮು ಹಿಡಿದುಕೊಂಡು ಮದೀನಕ್ಕಾಗಿ ಹೊರಟರು.

ಅವರನ್ನು ನನ್ನ ಗೋತ್ರದ ಜನರು ನೋಡಿದಾಗ ಅವರು ಹೀಗೆ ಹೇಳುತ್ತಾ ಅವರನ್ನು ತಡೆದರು. ವಲಸೆ ಮಾಡುವುದು. ನೀನು ಬಯಸುವರೆ, ನಿನ್ನ ಹೆಂಡತಿ ಏಕೆ ಮನೆಯನ್ನು ಬಿಡಬೇಕು ಮತ್ತು ಏಕೆ ಅವಳನ್ನು ನಗರ ನಗರಗಳಿಗೆ ತಿರುಗಿಸುತ್ತೀಯ. ಆಗ ಆ ಮಹಿಳೆಯ ಸಂಬಂಧಿಕರು ಒಂಟೆಯ ಲಗಾಮನ್ನು ಅವರ ಕೈಯಿಂದ ಕಸಿದುಕೊಂಡರು, ಆಕೆ ಹೇಳುತ್ತಾಳೆ. ನನ್ನನ್ನು ಹಿಡಿದುಕೊಂಡರು. ಇದನ್ನು ಕಂಡು ಬನು ಅಸದ್ ಕೋಪ್ರೋದ್ರಿಕರಾದರು ಮತ್ತು ಸಲ್ಮಾನತ್ತ ತಿರುಗಿ ಹೇಳಿದರು. ನಾವು ನನ್ನ ಮಗನನ್ನು ಅವರ ತಾಯಿಯ ಬಳಿಗೆಗೆ ಇರಿಸಲು ಬಿಡೆವು. ಅದಾಗ್ಯೂ ನೀವು ಅವನ ಗಂಡನನ್ನು ನನ್ನಿಂದ ಬೇರ್ಪಡಿಸಿದ್ದೀರಿ. ಅಂದಹಾಗೆ ಅಬು ಸಲ್ಮಾನ ಗೋತ್ರದವರು ನನ್ನ ಮಗ ಸಲ್ಮಾನ ಕೈ ಹಿಡಿದು ಅವನನ್ನು ತನ್ನ ಜೊತೆಗೆ ಕರೆದುಕೊಂಡು ಹೋದರು. ಹೆಂಡತಿಯನ್ನು ಮಹಿಳೆಯನ್ನು ಅವರ ತವರಿನವರು ಕರೆದುಕೊಂಡು ಹೋದರು. ಹೆಂಡತಿಯನ್ನು ಮಹಿಳೆಯನ್ನು ಅವರ ತವರಿನವರು ಕರೆದುಕೊಂಡು ಹೋದರು, ಆ ಮಹಿಳೆಯ ಬಳಿ ಮಗು ಏನಿದ್ದ, ಅವನನ್ನು ಅವರ ತಾತಂದಿರು ಕರೆದುಕೊಂಡು ಹೋದರು. ಹೇಳುತ್ತಾರೆ. ನನಗೆ ನನ್ನ ಗೋತ್ರದವರು ನನಗೆ ವಶಮಾಡಿಕೊಂಡರು ಮತ್ತು ನನ್ನ ಗಂಡ ಅಬು ಸಲ್ಮಾ ನನಗೆ ಬಿಟ್ಟು ಮದೀನ ಹೋದರು. ಹೀಗೆ ನಾವು ಮೂವರು ಸಹ ಒಬ್ಬರು ಮೊತ್ತೊಬ್ಬರಿಂದ ದೂರವಾದೆವು. ಹೇಳುತ್ತಾರೆ. ನನ್ನ ಸ್ಥಿತಿ ಹೇಗಿತ್ತೆಂದರೆ ನಾನು ದಿನಾಲೂ ಮುಂಜಾನೆ ಎದ್ದು ಬತ್‌ಹಾ ಸ್ಥಳಕ್ಕೆ ಬರುತ್ತಿದ್ದೆ ಮತ್ತು ಸಂಜೆಯವರೆಗೆ ಅಲ್ಲೇ ಕುಳಿತು ಅಳುತ್ತಿದ್ದೆ. ಹೆಚ್ಚು ಕಡಿಮೆ ಒಂದು ವರ್ಷ ಹೀಗೆ ಕಳೆಯಿತು. ಅಂದಹಾಗೆ ಒಂದು ದಿನ ಒಬ್ಬ ವ್ಯಕ್ತಿ ಅವನು ಬನಿ ಮುಗ್ಹೇರಗೆ ಸಂಬಂಧಿದವನಾಗಿದ್ದ, ಅವನಿಗೆ ನನ್ನ ಮೇಲೆ ದಯೆ ಬಂತು, ಅವನು ನನ್ನ ಗೋತ್ರದವರಿಗೆ ಹೇಳಿದನು, ನೀವು ಈ ಅಬಲೆ ಮಹಿಳೆಯನ್ನು ಬಿಡಲು ಬಯಸುವುದಿಲ್ಲವೇ, ನೀವು ಅವಳನ್ನು ಅವಳ ಗಂಡ ಮತ್ತು ಮಗನಿಂದಲೂ ಬೇರ್ಪಡಿಸಿದ್ದೀರಿ. ಆಗ ನನ್ನ ಗೋತ್ರದವರು ನನಗೆ ಅನುಮತಿ ನೀಡಿದರು. ನೀನು ಬಯಸಿದರೆ ನಿನ್ನ ಗಂಡನ ಬಳಿ ಹೋಗಬಹುದು. ಅದರ ನಡುವೆಯೇ ಬನು ಅಬ್ದುಲ್ ಅಸದ್ ಮತ್ತು ನನ್ನ ಮಗನನ್ನು ನನಗೆ ಮರಳಿಸಿದರು. ನಾನು ಒಂಟೆಯನ್ನು ಸಿದ್ಧಪಡಿಸಿದೆ. ಮಗನನ್ನು ಹುಡಿಯಲ್ಲಿ ಕೂರಿಸಿಕೊಂಡೆ ಮತ್ತು ನನ್ನ ಗಂಡನನ್ನು ಹಿಂಬಾಲಿಸಲು ಹೊರಟೆ. ನಾನು ಈಗ ಒಬ್ಬಂಟಿಯಾಗಿದ್ದೆ, ಜೊತೆಗೆ ಯಾರೂ ಇರಲಿಲ್ಲ. ನಾನು ಮನದಲ್ಲಿ ಅಂದುಕೊಂಡೆ, ಅಲ್ಲಾಹನು ನನಗೆ ಪ್ರಯಾಣಿಕನೊಬ್ಬನನ್ನು ಜೊತೆಗಾರನಾಗಿ ಮಾಡಿದರೆ ಗಂಡನ ಬಳಿಗೆ ತಲುಪಬಹುದು. ನಾನು ತನ್‌ಯೀಮ್ ತಲುಪಿದಾಗ ಕಾಕತಾಳಿಯವಾಗಿ ನನ್ನ ಭೇಟಿ ಉಸ್ಮಾನ್ ಬಿನ್ ತಲ್‌ಹರೊಂದಿಗೆ ಆಯಿತು. ಅವರು ಬನು ಅಬ್ದುದ್ದಾರ್(ರ) ಅವರ ಸಹೋದರರಾಗಿದ್ದರು. ಅವರು ಕೇಳಿದರು. ಅಬು ಉಮ್ಮಿಯಾದ ಮಗಳೇ ಎಲ್ಲಿಗೆ ಹೊರಟಿರುವೆ, ನಿಮ್ಮ ಪ್ರಯಾಣದ ಜೊತೆ ಯಾರಾದರೂ ಇದ್ದಾರೆಯೇ, ನಾನು ಹೇಳಿದೆ, ಅಲ್ಲಾಹನ ಮತ್ತು ಈ ಮಗುವಿನ ಹೊರತು ಯಾರೂ ಇಲ್ಲ. ಹಾಗಾದರೆ ನಿಮ್ಮ ಗುರಿ ಏನು. ಅವನು ಒಂಟೆಯ ಲಗಾಮು ಹಿಡಿದು ನನಗೆ ಕರೆದುಕೊಂಡು ಹೋದರು. ಅಲ್ಲಾಹನಾಣೆ ನಾನು ಅರಬರದಲ್ಲಿ ಇಂತಹ ಸಜ್ಜನೊಬ್ಬನನ್ನು ಎಲ್ಲೂ ಕಾಣೆ. ಪ್ರಯಾಣವೆಲ್ಲ ಮೌನವಾಗಿ ಒಂಟೆಯ ಲಗಾಮು ಹಿಡಿದು ಸಾಗಿದನು. ತಂಗುದಾಣ ಬಂದಾಗ ಒಂಟೆಯನ್ನು ಕೂರಿಸುತ್ತಿದ್ದ ಮತ್ತು ಸ್ವಯಂ ಒಂದು ಕಡೆ ಮರದ ಕೆಳಗೆ ಹೋಗಿ ಅಡ್ಡಬಿಡುತ್ತಿದ್ದನು. ಮತ್ತೆ ಹೋಗುವ ಸಮಯ ಬಂದಾಗ ಒಂಟೆಯ ಬಳಿ ಬಂದು ಸಾಮಾನು ಇಟ್ಟು ಒಂದು ಕಡೆ ಹೋಗಿ ನಿಲ್ಲುತ್ತಿದ್ದನು ಮತ್ತು ನನಗೆ ಸವಾರನಾಗಲು ಹೇಳುತ್ತಿದ್ದನು. ನಾನು ಸವಾರನಾಗಿ ಒಳ್ಳೆಯ ರೀತಿಯಲ್ಲಿ ಕುಳಿತುಕೊಂಡಾಗ, ಉಸ್ಮಾನ್ ಬಿನ್ ತಲ್‌ಹ ಬರುತ್ತಿದ್ದರು ಮತ್ತು ಒಂಟೆಯ ಲಗಾಮು ಹಿಡಿದು ನಡೆಯುತ್ತಿದ್ದರು. ತಂಗುದಾಣ ಬಂದಾಗ ಮತ್ತೆ ನಿಲ್ಲುತ್ತಿದ್ದರು. ಅವರು ಮದೀನ ಬರುವವರೆಗೆ ಹೀಗೆ ನಡೆದುಕೊಂಡರು. ಉಮ್ರೋ ಬಿನ್ ಶಾಫ್‌ರ ಊರು ಖುಬಾ ಬಂದಾಗ ಹೇಳಿದರು. ನಿನ್ನ ಗಂಡ ಇಲ್ಲೇ ನಿಂತಿರಬಹುದು.

**(ಮುಂದುವರಿಯುವುದು)**

## ಜಲ್ಸ ಸಾಲಾನ ಖಾದಿಯಾನ್

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಈ ಜಲ್ಸದೊಂದಿಗೆ ಅನೇಕ ಅನುಗ್ರಹಗಳು ಅನಿವಾರ್ಯವಾಗಿ ಸೇರಿಕೊಂಡಿರುವುದರಿಂದ ದಾರಿ ಖರ್ಚಿಗೆ ಸಾಮರ್ಥ್ಯವಿರುವ ಪ್ರತಿಯೊಬ್ಬನು ಈ ಜಲ್ಸಕ್ಕೆ ಆಗಮಿಸಬೇಕು. ಚಳಿಗಾಲಕ್ಕೆ ಅವಶ್ಯಕವಾದ ಹಾಸುವ ಮತ್ತು ಹೊದಿಕೆ ಬಟ್ಟೆಗಳನ್ನು ಆವಶ್ಯಕವಾದಷ್ಟು ತರಬೇಕು. ಅಲ್ಲಾಹನ ಮತ್ತು ಅವನ ರಸೂಲರ ಮಾರ್ಗದಲ್ಲಿ ಚಿಕ್ಕಪುಟ್ಟ ಅಡ್ಡಿ ಆತಂಕಗಳನ್ನು ನಿರ್ಲಕ್ಷಿಸಬೇಕು. ಅಲ್ಲಾಹನು ನಿಷ್ಠಾವಂತನಿಗೆ ಪ್ರತಿಯೊಂದು ಹೆಜ್ಜೆಯಲ್ಲಿಯೂ ಅನುಗ್ರಹ ನೀಡುತ್ತಾನೆ. ಅವನ ಮಾರ್ಗದಲ್ಲಿ ಪಡುವ ಕಷ್ಟಗಳನ್ನು ವ್ಯರ್ಥಗೊಳಿಸುವುದಿಲ್ಲ. ನಾನು ಪುನರಾವರ್ತಿಸಿ ಬರೆಯುತ್ತೇನೆ ಈ ಜಲ್ಸವನ್ನು ಮಾನವರ ಸಾಮಾನ್ಯ ಜಲ್ಸದ ಹಾಗೆಂದು ಯೋಚಿಸಬೇಡಿರಿ. ಇದು ಸತ್ಯಕ್ಕೆ ಬೆಂಬಲ ನೀಡುವ ಮತ್ತು ಇಸ್ಲಾಮಿನ ಪ್ರಚಾರ ಮಾಡುವ ಅಸ್ತಿಭಾರವನ್ನು ಹೊಂದಿದೆ. ಈ ಜಮಾಅತಿನ ಅಸ್ತಿಭಾರವನ್ನು ಅಲ್ಲಾಹನು ತನ್ನ ಕೈಯಿಂದ ಹಾಕಿದ್ದಾನೆ. ಇದಕ್ಕೋಸ್ಕರ ಅಲ್ಲಾಹನು ಸಮುದಾಯಗಳನ್ನು ಸಿದ್ಧಪಡಿಸಿಟ್ಟಿದ್ದಾನೆ. ಅವರು ಬೇಗನೆ ಇದರಲ್ಲಿ ಬಂದು ಸೇರುವರು. ಯಾಕೆಂದರೆ ಇದು ಸರ್ವಶಕ್ತನಾದವನ ಕೆಲಸವಾಗಿದೆ. ಅವನಿಗೆ ಅಸಾಧ್ಯವಾದುದು ಏನೂ ಇಲ್ಲ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: "ಅಲ್ಲಾಹನಿಗೋಸ್ಕರ ಈ ಜಲ್ಸದಲ್ಲಿ ಭಾಗವಹಿಸಲು ಪ್ರಯಾಣ ಮಾಡುವ ಪ್ರತಿಯೊಬ್ಬನ ಜೊತೆಗೆ ಅಲ್ಲಾಹನು ಜೊತೆಗಾರನಾಗಿರಲಿ. ಅವನಿಗೆ ಬೃಹತ್ತಾದ ಪ್ರತಿಫಲ ನೀಡಲಿ. ಅವರೆಲ್ಲರಿಗೆ ಕಾರುಣ್ಯದೊರಲಿ. ಅವರ ಕಷ್ಟಗಳನ್ನೂ ಆತಂಕಭರಿತ ಸ್ಥಿತಿಯನ್ನೂ ನಿವಾರಿಸಿ ಅವರಿಗೆ ಸೌಲಭ್ಯ ನೀಡುವಂತಾಗಲಿ. ಅವರ ಚಿಂತೆಗಳನ್ನೂ ದುಃಖಗಳನ್ನೂ ದೂರ ಸರಿಸಲಿ. ಅವರಿಗೆ ಪ್ರತಿಯೊಂದು ಕಷ್ಟದಿಂದ ಮುಕ್ತಿಯನ್ನು ದಯಪಾಲಿಸಲಿ. ಅವರ ಇಚ್ಛೆಗಳ ಮಾರ್ಗಗಳನ್ನು ಅವರಿಗೆ ತೆರೆದುಕೊಡಲಿ. ಆಖಿರತ್‌ನಲ್ಲಿ ಅಲ್ಲಾಹನು ಅವರನ್ನು ತಾನು ಅನುಗ್ರಹ ಮತ್ತು ಕಾರುಣ್ಯ ನೀಡಿದ ತನ್ನ ದಾಸರೊಂದಿಗೆ ಎದ್ದೇಳಿಸಲಿ. ಅವರ ಪ್ರಯಾಣದ ಅಂತ್ಯದ ವರೆಗೂ ಅವರ ಬದಲು ಅವರ ಪ್ರತಿನಿಧಿಯಾಗಿರಲಿ. ಓ ಅಲ್ಲಾಹ್, ಕೀರ್ತಿಶಾಲಿಯೂ ವರದಾನ ನೀಡುವವನೂ ಕಾರುಣ್ಯಮಯನೂ ಕಷ್ಟ ಪರಿಹರಿಸುವವನೂ ಆಗಿರುವ ನೀನು ಈ ಎಲ್ಲ ಪ್ರಾರ್ಥನೆಗಳನ್ನೂ ಅಂಗೀಕರಿಸು. ನಮ್ಮ ವಿರೋಧಿಗಳ ವಿರುದ್ಧ ಪ್ರಕಾಶಮಾನವಾದ ದೃಷ್ಟಾಂತಗಳ ಮೂಲಕ ನಮಗೆ ಜಯವನ್ನು ನೀಡು. ಎಲ್ಲಾ ಶಕ್ತಿಸಾಮರ್ಥ್ಯಗಳು ನಿನ್ನಲ್ಲಿ ಮಾತ್ರ ಇವೆ" – ಆಮೀನ್ ಸುಮ್ಮ ಆಮೀನ್. **(ಮಜ್‌ಮೂಅ ಇಶ್ತಿಹಾರಾತ್ ಸಂಪುಟ-1 ಪುಟ 341-342, ಇಶ್ತಿಹಾರ್ 1892 ಡಿಸೆಂಬರ್ ದಿನಾಂಕ 7)**

## ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್‌ನ ಕಚ್ಚೇರಿಗಳಲ್ಲಿ ಸೇವೆಸಲ್ಲಿಸಲು ಬಯಸುವವರು ಗಮನಹರಿಸಿರಿ

**ಎರಡನೇ ದರ್ಜೆಯ ಪೋಸ್ಟ್‌ಗಾಗಿ ಷರತ್ತುಗಳು**

(1) ಅಭ್ಯರ್ಥಿಯ ವಯಸ್ಸು 25 ವರ್ಷಗಳಿಗಿಂತ ಹೆಚ್ಚು ಮತ್ತು 18 ವರ್ಷಗಳಿಗಿಂತ ಕಡಿಮೆಯಿರಬಾರದು (2) ಅಭ್ಯರ್ಥಿಯು 45% ಅಂಕಗಳೊಂದಿಗೆ ಕನಿಷ್ಠ 10+2 ರ ಶೈಕ್ಷಣಿಕ ಅರ್ಹತೆಯನ್ನು ಹೊಂದಿರಬೇಕು (3) ಅಭ್ಯರ್ಥಿಯು ಉರ್ದು/ಇಂಗ್ಲಿಷ್ ಕಮ್ಪೋಝಿಂಗ್ ತಿಳಿದಿರಬೇಕು ಮತ್ತು ವೇಗದ ಮಿತಿ ಪ್ರತಿ ನಿಮಿಷಕ್ಕೆ 25 ಪದಗಳಾಗಿರಬೇಕು (4) ಈ ಪ್ರಕಟಣೆಯ ನಂತರ 2 ತಿಂಗಳೊಳಗೆ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸಲಾಗುತ್ತದೆ.

ಎರಡನೇ ದರ್ಜೆಯವರಿಗೆ ಪರೀಕ್ಷೆ ಕೆಳಕಂಡಂತೆ ಪಠ್ಯಕ್ರಮದಂತೆ ಇರುತ್ತದೆ. ಪರೀಕ್ಷೆಯ ಪ್ರತಿ ಭಾಗದಲ್ಲೂ ಉತ್ತೀರ್ಣ ಆಗುವುದು ಕಡ್ಡಾಯವಾಗಿರುತ್ತದೆ.

**ಭಾಗ-1:** * ಪವಿತ್ರ ಖುರ್‌ಆನ್ ನಾಝಿರ ಪೂರ್ಣ, ಅನುವಾದದೊಂದಿಗೆ ಮೊದಲ ಭಾಗ * ಚಾಲೀಸ್ ಜವಾಹಿರ್ ಪಾರೆ. ಅರ್ಕಾನೆ ಇಸ್ಲಾಮ್, ಸಂಪೂರ್ಣ ನಮಾಝ್ ಅನುವಾದದೊಂದಿಗೆ. **(30 ಸಂಖ್ಯೆಗಳು)**

**ಭಾಗ-2:** ಕಿಶ್ತಿ ನೂಹ್, ಬರಕಾತುದ್ದುಆ, ದೀನೀ ಮಾಲೂಮಾತ್ * ಪ್ರಬಂಧ ಅಹ್ಮದೀಯ ಜಮಾತ್‌ನ ನಂಬಿಕೆಗಳು * ನಝುಮ್ ದುರ್ರೆ ಸಮೀನ್ (ಶಾನ್ ಇಸ್ಲಾಂ). **(20 ಅಂಕಗಳು)**

**ಭಾಗ-3:** ಇಂಗ್ಲಿಷ್ ಪದವಿ ಪೂರ್ವ ಶಿಕ್ಷಣದ (10+2) ಮಾನದಂಡದ ಪ್ರಕಾರ. **(20 ಅಂಕಗಳು)**

**ಭಾಗ-4:** ಮೆಟ್ರಿಕ್ ಮಾನದಂಡದ ಪ್ರಕಾರ ಅಂಕಗಣಿತ (ಆಫೀಸ್ ಇಂಪ್ರೆಸ್‌ಗೆ ಸಂಬಂಧಿಸಿದ ಪ್ರಶ್ನೆಗಳು). **(20 ಅಂಕಗಳು)**

**ಭಾಗ-5:** ಸಾಮಾನ್ಯಜ್ಞಾನ (ಜಿ.ಕೆ) **(10 ಅಂಕಗಳು)**

(6) ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳನ್ನು ಮಾತ್ರ ಸಂದರ್ಶಿಸಲಾಗುವುದು (7) ಲಿಖಿತ ಪರೀಕ್ಷೆ, ಕಂಪ್ಯೂಟರ್ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಯಶಸ್ವಿನ ಸಂದರ್ಭದಲ್ಲಿ, ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯಾನ್‌ನಲ್ಲಿ ವೈದ್ಯಕೀಯ ತಪಾಸಣೆಗೆ ಒಳಗಾಗಬೇಕಾಗುತ್ತದೆ ಮತ್ತು ನೂರ್ ಆಸ್ಪತ್ರೆ ಸಮಿತಿಯ ವರದಿಯ ಪ್ರಕಾರ ಯಾರು ಆರೋಗ್ಯವಂತಿರುತ್ತಾರೋ ಆ ಅಭ್ಯರ್ಥಿಗಳು ಮಾತ್ರ ಸೇವೆಸಲ್ಲಿಸಲು ಅರ್ಹರಾಗಿರುತ್ತಾರೆ. (8) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಖಾದಿಯಾನ್‌ನಲ್ಲಿ ತನ್ನ ಸ್ವಂತ ವಸತಿಯನ್ನು ವ್ಯವಸ್ಥೆಗೊಳಿಸಬೇಕಾಗುತ್ತದೆ, ವಸತಿಗೆ ಸಂಬಂಧಿಸಿದಂತೆ ನಂತರ ಸ್ವೀಕರಿಸಿದ ಅರ್ಜಿಯ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಾಗುವುದಿಲ್ಲ. (9) ಖದಿಯಾನ್ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯ ಸ್ವಂತ ಜವಾಬ್ದಾರಿಯಗಿರುತ್ತದೆ.

**(ಗಮನಿಸಿ: ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ದಿನಾಂಕವನ್ನು ಅಭ್ಯರ್ಥಿಗಳಿಗೆ ನಂತರ ತಿಳಿಸಲಾಗುವುದು)**

***ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:***

ನಝಾರತ್ ದೀವಾನ್ ಸ್ರ್ ಅಂಜುಮನ್ ಅಹ್ಮದಿಯಾ
ಖಾದಿಯಾನ್-143516, ಮೊಬೈಲ್: 09682627592,
09682587713,
ಕಛೇರಿ: 01872-501130, ಇ-ಮೇಲ್: diwan@qadian.in

**ಸೂಚನೆ::** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ R ° Ã¥ ಕ್ **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ ಜುಮುಅ**ವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ

**MUSLIM TELEVISION AHMADIYYA INTERNATIONAL**
**www.mta.tv**

**"ಮೇಲಿನ ಕೈ ಕೆಳಗಿನ ಕೈಗಿಂತ ಉತ್ತಮವಾಗಿದೆ. (ಎಂದರೆ ಧಾನಧರ್ಮ ಕೊಡುವವನು ಅದನ್ನು ಪಡೆದುಕೊಳ್ಳುವವನಿಗಿಂತ ಉತ್ತಮವಾಗಿದ್ದಾನೆ)"**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**M.B. Nasir Ahmed & Family, Bengaluru, Karnataka**

## ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್‌ನ ಡ್ರೈವರ್ ಹುದ್ದೆಗೆ ಘೋಷಣೆ

**ಷರತ್ತುಗಳು**

(1) ಅಭ್ಯರ್ಥಿಯ ವಯಸ್ಸು 18 ವರ್ಷಕ್ಕಿಂತ ಹೆಚ್ಚು ಮತ್ತು 40 ವರ್ಷಕ್ಕಿಂತ ಕಡಿಮೆ ಇರಬೇಕು. (2) ಅಭ್ಯರ್ಥಿಯು ಕನಿಷ್ಠ 10ನೇ ತರಗತಿ ತೇರ್ಗಡೆ ಹೊಂದಿರಬೇಕು. (3) ಅಭ್ಯರ್ಥಿಯು ಮಾನ್ಯವಾದ ನಾಲ್ಕು ಚಕ್ರದ ಚಾಲನಾ ಪರವಾನಗಿಯನ್ನು ಹೊಂದಿರಬೇಕು. (4) ಅಭ್ಯರ್ಥಿಯು ಸರ್ಕಾರಿ ಅಥವಾ ಖಾಸಗಿ ಸಂಸ್ಥೆಯಲ್ಲಿ ಕನಿಷ್ಠ 2 ವರ್ಷಗಳ ಚಾಲನಾ ಅನುಭವವನ್ನು ಹೊಂದಿರುವುದು ಅವಶ್ಯಕ. ಅದೇ ರೀತಿ ಅಭ್ಯರ್ಥಿಯು ತನ್ನ ಅರ್ಜಿಯೊಂದಿಗೆ ಅಭ್ಯರ್ಥಿಯು ಅನುಭವವನ್ನು ಪಡೆದಿರುವ ಸಂಸ್ಥೆಯ ಅನುಭವ ಪ್ರಮಾಣಪತ್ರವನ್ನು (Experience Certificate) ಸಲ್ಲಿಸುವುದು ಸಹ ಕಡ್ಡಾಯವಾಗಿದೆ. (5) ಅಭ್ಯರ್ಥಿಯು ತನ್ನ ಜನ್ಮ ಪ್ರಮಾಣಪತ್ರವನ್ನು (Birth Certificate) ಸಲ್ಲಿಸುವುದು ಅವಶ್ಯಕ. (6) ಅಭ್ಯರ್ಥಿಯು ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಉತ್ತೀರ್ಣ ಆಗಬೇಕು. (7) ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಚಾಲನಾ ಪರೀಕ್ಷೆಯನ್ನು (Driving Test) ಸಹ ನೀಡಲಾಗುತ್ತದೆ. (8) ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾಜುಥಿಂನ್‌ನಿಂದ ವೈದ್ಯಕೀಯ ಫಿಟ್‌ನೆಸ್ ಪ್ರಮಾಣಪತ್ರದ ಪ್ರಕಾರ ಫಿಟ್ ಮತ್ತು ಆರೋಗ್ಯವಂತರಾಗಿರಬೇಕು. (9) ನೇಮಕಾತಿಯ ನಂತರ ಅಭ್ಯರ್ಥಿ ಚಾಲಕನಿಗೆ ಗ್ರೇಡ್-2 ಗೆ ಸಮಾನವಾದ ಭತ್ಯೆ ಮತ್ತು ಇತರ ಸೌಲಭ್ಯಗಳನ್ನು ನೀಡಲಾಗುವುದು. (10) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಗಳು ಮೊದಲ ಐದು ವರ್ಷಗಳ ಕಾಲ ಖಾದಿಯಾನ್‌ನಲ್ಲಿ ತಮ್ಮ ಸ್ವಂತ ವಸತಿಯ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ. (11) ಖಾದಿಯಾನ್ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯ ಸ್ವಂತ ಜವಾಬ್ದಾರಿಯಗಿರುತ್ತದೆ.

**ಗಮನಿಸಿ: ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ, ಸಂದರ್ಶನ ಮತ್ತು ಡ್ರೈವಿಂಗ್ ಪರೀಕ್ಷೆಯ ದಿನಾಂಕವನ್ನು ನಂತರ ತಿಳಿಸಲಾಗುವುದು.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

ನಝಾರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ
ಖಾದಿಯಾನ್-143516
ಮೊಬೈಲ್: 09888232530, 09682627592,
ಕಛೇರಿ: 01872-501130
ಇ-ಮೇಲ್: diwan@qadian.in

## ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:-**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರೀಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: ಇನ್ನ **ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ-5, ಪುಟ-48-49, ಮುದ್ರಣ ಖಾದಿಯಾನ್ 2003)

**(ನಝಾರತ್ ಇಸ್ಲಾಹ್-ವ-ಇರ್‌ಶಾದ್ (ಮರ್‌ಕಝಿಯಾ, ಖಾದಿಯಾನ್)**

**"ಯಾರು ಜನರಿಗೆ ಕೃತಜ್ಞತೆ ಸಲ್ಲಿಸುವುದಿಲ್ಲವೋ ಅವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸುವುದಿಲ್ಲ."**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.05, Thursday, 28 November 2024, Issue No. 48

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಷ್ಟ್, ಸೆಪ್ಟೆಂಬರ್ 2023

*(ಬದರ್ ಸಂಚಿಕೆ-46ರ ಉಳಿದ ಭಾಗ ಮುಂದುವರಿಸಲಾಗಿದೆ)*

## ಹುಝೂರ್ ಅನ್ವರ್(ಅತಬಅ) ಅವರ ಮಹಿಳೆಯರಲ್ಲಿ ಭಾಷಣ

ತಶ್ಹುದ್, ತವ್ವೂಝ್, ತಸ್ಮಿಯಾ ಮತ್ತು ಸೂರಃ ಫಾತಿಹಾದ ಪಠಣದ ನಂತರ ಹುಝೂರ್ ಅನ್ವರ್(ಅತಬಅ) ಹೇಳಿದರು:

ಯು.ಕೆ ಜಲ್ಸ ಸಾಲಾನದಲ್ಲಿ ನಾನು ಪ್ರಾಥಮಿಕ ಕಾಲದ ಮಹಿಳೆಯರ ಘಟನಾವಳಿಗಳ ಬಗ್ಗೆ ವಿವರಿಸಿದ್ದೆ, ಇಂದು ಸಹ ಅದನ್ನು ಮುಂದುವರೆಸಿಕೊಂಡು ಇಲ್ಲಿಯೂ ಘಟನೆಗಳನ್ನು ವಿವರಿಸುವೆನು. ಆ ಮಹಿಳೆಯರು ಹಝ್ರತ್ ಪೈಗಂಬರ್(ಸ)ರ ಕಾಲದ ಸಹವಾಸದ ಭಾಗ್ಯ ಪಡೆದವರಾಗಿದ್ದರು. ಅವರು ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಇಸ್ಲಾಮಿನ ನಿಜವಾದ ಚಿತ್ರಣ ನೀಡಲು ಪ್ರಯತ್ನ ಮಾಡಿದರು. ಅದು ಅಲ್ಲಾಹನ ಅನುಸರಣೆ ಆಗಲಿ ಅಥವಾ ಆರಾಧನೆಯ ವಿಷಯ ಆಗಿರಲಿ ಅಥವಾ ಮನೆಯ ಮೂಲ ಸಾಮಾಜಿಕ ಜೀವನದ ಪ್ರತಿಯಾಗಲಿ, ಮಕ್ಕಳ ತರಬೇತಿ ವಿಷಯವಾಗಿರಲಿ, ಸಂಪತ್ತು ಜೀವಬಲಿದಾನದ ವಿಷಯವಾಗಿರಲಿ, ಇಸ್ಲಾಮಿನ ಸಲುವಾಗಿ ಸಾಹಸ, ಶೌರ್ಯ ಪ್ರದರ್ಶಿಸುವ ಸಂದರ್ಭಗಳಾಗಲಿ, ಒಟ್ಟಿನಲ್ಲಿ ಎಲ್ಲಾ ಸಂದರ್ಭಗಳಲ್ಲೂ ಮತ್ತು ಎಲ್ಲಾ ರೀತಿಯಲ್ಲೂ ನಮಗೆ ಆದರ್ಶವಾಗಿರುತ್ತಾರೆ. ಕೇವಲ ಸ್ತ್ರೀಯರಿಗೆ ಮಾತ್ರವಲ್ಲ, ಪುರುಷರಿಗೂ ಸಹ, ಅಲ್ಲಾಹನ ಮಾರ್ಗದಲ್ಲಿ ಸಾಂಪತ್ತಿಕ ತ್ಯಾಗದ ಒಂದು ಘಟನೆ ಹೀಗೆ ದೊರೆಯುತ್ತದೆ.

ಹಝ್ರತ್ ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ. ಹಝ್ರತ್ ಪೈಗಂಬರ್(ಸ) ರವರು ಹಬ್ಬದ ದಿನ ಮನೆಯಿಂದ ಹೊರಟರು ಮತ್ತು ಎರಡು ರಕತ್ ನಮಾಝ್ ನಿರ್ವಹಿಸಿದರು. ಅದಕ್ಕಿಂತ ಮುಂಚೆ ಮತ್ತು ನಂತರ ಯಾವ ನಫಿಲ್ ನಮಾಝ್ ನಿರ್ವಹಿಸಿಲಿಲ್ಲ. ಹೀಗೆ ಹಬ್ಬದ ದಿನ, ಹಬ್ಬದ ನಮಾಝ್ ಆಗಮನಕ್ಕಿಂತ ಮುಂಚೆ ಯಾವ ನಫಲ್ ನಮಾಝ್ ಮಾಡಲಾಗುವುದಿಲ್ಲ ಎಂದು ತೋರಿಸಿಕೊಟ್ಟರು. ಮತ್ತು ಅವರು(ಸ) ಮಹಿಳೆಯರತ್ತ ತೆರಳಿದರು. ಅವರ ಜೊತೆಯಲ್ಲಿ ಹಝ್ರತ್ ಬಿಲಾಲ್(ರ) ಅವರಿದ್ದರು. ಅವರು(ಸ) ಮಹಿಳೆಯರಿಗೆ ದಾನ ನೀಡಬೇಕು ಎಂದು ಉಪದೇಶ ನೀಡಿದರು, ಆಗ ಮಹಿಳೆಯರು ತನ್ನ ಕಿವಿಯ ಆಭರಣಗಳನ್ನು ಮತ್ತು ಕಡಗಗಳನ್ನು ಇಳಿಸಿಕೊಡಲು ಪ್ರಾರಂಭಿಸಿದರು. ತನ್ನ ಆಭರಣಗಳನ್ನು ತೆಗೆದು ನೀಡಿದರು. ಸಾಂಪತ್ತಿಕ ತ್ಯಾಗದಲ್ಲಿ ಇಂದು ಅಹ್ಮದಿ ಮಹಿಳೆಯರು ಸಹ ತಮ್ಮ ಆದರ್ಶಗಳನ್ನು ಸ್ಥಾಪಿಸುವವರಾಗಿದ್ದಾರೆ. ಇವೇ ಗುಣಗಳು ಅವರ ಮನಗಳನ್ನು ಅನುಗ್ರಹಿತರನ್ನಾಗಿ ಮಾಡುವುದು. ಅವರ ಆತ್ಮದಲ್ಲಿ ದೇಹದಲ್ಲೂ ಅನುಗ್ರಹ ಉಂಟಾಗುವುದು.

ಹಝ್ರತ್ ಪೈಗಂಬರ್(ಸ)ರು ಮಹಿಳೆಯರಿಗೆ ಅಲ್ಲಾಹನ ಅನುಗ್ರಹಗಳನ್ನು ಪಡೆಯಲು ಉಪದೇಶ ನೀಡುತ್ತಿದ್ದರು ಮತ್ತು ವ್ಯರ್ಥ ಕಾರ್ಯಗಳಿಂದ ದೂರ ಇರಲು ಹೇಳುತ್ತಿದ್ದರು. ಅದರಿಂದ ಯಾವ ಪ್ರಯೋಜನವು ಇಲ್ಲ. ಕೆಲವರು ಬರೆಯುತ್ತಾರೆ. ನಾನು ಅದು ಮಾಡುತ್ತೇನೆ. ಇದು ಮಾಡುತ್ತೇನೆ, musician ಆಗುತ್ತೇನೆ, ನಟಿಯರಾಗುತ್ತೇವೆ ಎಂದು. ಅದರಿಂದ ಏನೂ ಪ್ರಯೋಜನವಿಲ್ಲ. ಇನ್ನೊಬ್ಬರನ್ನು ಸಹಾಯ ನೀಡುವಂತಹ ಉಪಯೋಗವಾಗುವಂತಹ ಕೆಲಸಗಳನ್ನು ಮಾಡಬೇಕು.

ಹಝ್ರತ್ ಉಮ್ಮೇ ಸನಾನ್ ಹೇಳುತ್ತಾರೆ. ನಾನು ಹಝ್ರತ್ ಪೈಗಂಬರ್(ಸ) ರವರ ಸೇವೆಯಲ್ಲಿ ಹಾಜರಾದೆ ಮತ್ತು ಇಸ್ಲಾಂ ಸ್ವೀಕರಿಸುವೆನು. ಹುಝೂರ್(ಸ) ರವರ ದೃಷ್ಟಿ ನನ್ನ ಕೈ ಮೇಲೆ ಇತ್ತು. ಹೇಳಿದರು. ನಿಮ್ಮ ಪೈಕಿ ಯಾವ ಮಹಿಳೆಯು ತಮ್ಮ ಕೈ ಅಭಯಗಳಲ್ಲಿ, ಉಗುರುಗಳ ಮೇಲೆ ಯಾವ ರೀತಿಯ ಶೃಂಗಾರ ಮಾಡಿಕೊಂಡರೆ ತಪ್ಪೇನಲ್ಲ. ರೇಶ್ಮೆ ವಸ್ತ್ರ ಏನೂ ದೊರೆಯದಿದ್ದರೆ ಅದರ ಒಂದು ದಾರವೇ ಸರಿ ಹಾಕಿಕೊಳ್ಳಬಹುದು. ಹಝ್ರತ್ ಉಮ್ಮೇ ಸನಾನ್ ಅದನ್ನು ಪಾಲಿಸಿದರು. ಈ ಮೂಲಕ ಪ್ರವಾದಿ(ಸ) ರು ಮಹಿಳೆಯರಿಗೆ ಈ ಸಂದೇಶ ನೀಡಿದರು. ಕೈಗಳಲ್ಲಿ ಬೇಕಾದ ರೀತಿಯಲ್ಲಿ ಆಭರಣಗಳನ್ನು ಉಪಯೋಗಿಸಬಹುದು. ಕೆಲವರು ಪ್ರಶ್ನಿಸುತ್ತಾರೆ. ಉಗುರುಗಳ ಮೇಲೆ ಪಾಲಿಶ್ ಹಚ್ಚಬಹುದೇ ಎಂದು. ನೇಲ್ ಪಾಲಿಷ್ ಹಚ್ಚಬಹುದು, ಇದಾವುದೂ ನಿಷಿದ್ಧವಲ್ಲ. ಸತ್ಕರ್ಮಿಗಳಿಗಾಗಿ ಸಹಾಬಿಯಾತ್ ತುಂಬಾ ಪ್ರಯತ್ನ ಮಾಡುತ್ತಿದ್ದರು.

ಒಬ್ಬರ ತಾಯಿ ಯಾವುದೇ ಪುಣ್ಯಕಾರ್ಯದ ನಿಶ್ಚಯ ಮಾಡಿಕೊಂಡಿದ್ದಾಳೆ. ಅದು ಅವರ ಜೀವನದಲ್ಲಿ ಪೂರ್ತಿಯಾಗದಿದ್ದರೆ, ಪರಿಹಾರ ರೂಪವಾಗಿ ಅವರ ಮರಣದ ನಂತರ ಅವರ ಸಂತಾನ ಅವರಿಗಾಗಿ ಪುಣ್ಯಕಾರ್ಯಗಳನ್ನು ಮಾಡಬಹುದು. ಈ ಪೈಕಿ ಒಂದು ವರದಿ ಬರುತ್ತದೆ. ಹಝ್ರತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ. ಜಹೀನ ಗೋತ್ರದ ಓರ್ವ ಮಹಿಳೆ ಹಝ್ರತ್ ಪೈಗಂಬರ್(ಸ) ರವರ ಸೇವೆಯಲ್ಲಿ ಹಾಜರಾಗಿ ಹೇಳಿದರು. ನನ್ನ ತಾಯಿ ಹರಕೆ ಹೊತ್ತಿದ್ದರು. ನಾನು ಹಜ್ಜ್ ಮಾಡುವೆನು ಎಂದು. ಆದರೆ ಅವಳು ಹಜ್ ಮಾಡದೆ ಚೀರಿ ಹೋದಳು. ನಾನು ಅವರ ಪರವಾಗಿ ಹಜ್ಜ್ ಮಾಡಬಹುದೆ. ಹಝ್ರತ್ ಪೈಗಂಬರ್(ಸ) ಹೇಳಿದರು. ಹೌದು. ಅವರ ಪರವಾಗಿ ಹಜ್ ಮಾಡಬಹುದೇ, ನಿಮ್ಮ ತಾಯಿಯ ಮೇಲೆ ಏನಾದರೂ ಸಾಲವಿರುತ್ತಿದ್ದರೆ, ನೀವು ಸಾಲ ತೀರಿಸುವರೆ, ಅಲ್ಲಾಹನ ಸಾಲವು ತೀರಿಸಿರಿ. ಏಕೆಂದರೆ ಅಲ್ಲಾಹನು ಹೆಚ್ಚು ಹಕ್ಕುಳ್ಳವನಾಗಿದ್ದಾನೆ. ಅವನೊಂದಿಗೆ ನಿಷ್ಠೆ ತೋರಿಸಬೇಕಾಗಿದೆ. ಎಲ್ಲರಿಗಿಂತ ಹೆಚ್ಚು ನಿಷ್ಠೆ ಅಲ್ಲಾಹನೊಂದಿಗಿರಬೇಕು. ಇಸ್ಲಾಮಿನಲ್ಲಿ ಪ್ರಾರಂಭದಲ್ಲಿ ಯಾರಿಗೆ ಹುತಾತ್ಮನ ಸ್ಥಾನ ದೊರೆತಿದೆ. ಅವರ ಬಗ್ಗೆ ಇತಿಹಾಸದಲ್ಲಿ ಬರುತ್ತದೆ. ಒಂದು ಮಹಿಳೆಯು ಅದರಲ್ಲಿ ಶಾಮೀಲಾಗಿದ್ದಳು. ಆದ್ದರಿಂದ ಅದರ ವಿವರ ನೀಡುತ್ತಾ ಬರೆಯಲಾಗಿದೆ. ಹಝ್ರತ್ ಸಮಯ್ಯ ಬಿನ್ತ್ ಮುಸ್ಲಿಂ ಇಸ್ಲಾಂ ಸ್ವೀಕರಿಸಿದರು. ಅವರಿಗೆ ಅವಿಶ್ವಾಸಿಗಳು ನಾನಾ ರೀತಿಯ ಹಿಂಸೆ ಕೊಡಲು ಪ್ರಾರಂಭಿಸಿದರು. ಎಲ್ಲದ್ದಕ್ಕಿಂತ ಕಠಿಣವಾದ ಹಿಂಸೆ ಎಂದರೆ ಅವರನ್ನು ಮಕ್ಕದ ಅಗ್ನಿರೂಪದ ಮರಳ ಮೇಲೆ, ಲೋಹಧರಿಸಿ ಬಿಸಿಲಿನಲ್ಲಿ ಅವರಿಗೆ ನಿಲ್ಲಿಸುತ್ತಿದ್ದರು. ಆದರೂ ಆಕೆ ಇಸ್ಲಾಮಿನ ಮೇಲೆ ದೃಢಚಿತ್ತರಾಗಿ ನಿಂತರು. ಒಂದು ದಿನ ಎಂದಿನಂತೆ ಅವರನ್ನು ಲೋಹಧರಿಸಿ ಬಿಸಿಲಿನಲ್ಲಿ ಭೂಮಿಯ ಮೇಲೆ ಮಲಗಿಸಿದ್ದರು. ಅದೇ ಅವಸ್ಥೆಯಲ್ಲಿ ಅಲ್ಲಿಂದ ಹಝ್ರತ್ ಪೈಗಂಬರ್(ಸ) ರವರ ಹೋಗುತ್ತಿದ್ದರು. ಅದೇ ಅವಸ್ಥೆಯಲ್ಲಿ ಅಲ್ಲಿಂದ ಹಝ್ರತ್ ರಸೂಲುಲ್ಲಾಹ್ (ಸ) ರವರು ಹೋಗುತ್ತಿದ್ದರು. ಹೇಳಿದರು. ಸಹನೆ ಹೊಂದಿರಿ, ಸ್ವರ್ಗ ನಿಮ್ಮ ಸ್ಥಾನವಾಗಿದೆ, ಆದರೆ ಅವಿಶ್ವಾಸಿಗಳು ಅಷ್ಟಕ್ಕೆ ನಿಲ್ಲಲಿಲ್ಲ, ಅಬುಜಹಲ್ ಅವರ ತೊಡುಗಳಲ್ಲಿ ಬಾಣ ಹೊಡೆದು ಶಹೀದರನ್ನಾಗಿ ಮಾಡಿದರು. ಆದ್ದರಿಂದ ಇತಿಹಾಸದಲ್ಲಿ ಕೆಲವು ಕಡೆ ಹೀಗೆ ಬರೆದದ್ದನ್ನು ಕಾಣಬಹುದು. ಇಸ್ಲಾಮಿನಲ್ಲಿ ಶಹೀದರಾಗುವ ಪ್ರಥಮ ಭಾಗ್ಯ ಅವರಿಗೆ ಲಭಿಸಿದೆ.

ಮಕ್ಕಳಿಗೂ ಅಲ್ಲಾಹನ ಮಾರ್ಗದಲ್ಲಿ ಸಾಹಸ ಪ್ರದರ್ಶನ ಮಾಡುವ ಧೈರ್ಯ ಮಹಿಳೆಯರು ಸಾಧಿಸುತ್ತಿದ್ದರು. ಈ ಪೈಕಿ ಇತಿಹಾಸದಲ್ಲಿ ಒಂದು ಘಟನೆ ಹೀಗೆ ದೊರೆಯುತ್ತದೆ. ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೇರ್, ಹಜ್ಜಾಜ್‌ರೊಡನೆ ಯುದ್ಧಕ್ಕೆ ನಿಂತಾಗ ಅವರ ತಾಯಿ ಹಝ್ರತ್ ಅಸ್ಮಾ(ರ) ಅಸ್ವಸ್ಥರಾಗಿದ್ದರು. ಅವರು ಅವರ ಬಳಿ ಬಂದರು ಮತ್ತು ಆರೋಗ್ಯ ವಿಚಾರಿಸಿದ ನಂತರ ಹೇಳಿದರು. ಸಾವಿನಲ್ಲೇ ಸಮಾಧಾನವಿದೆ. ತಾಯಿಯ ಈ ಸ್ಥಿತಿ ಕಂಡು ಸಮಾಧಾನ ನೀಡಿದರು. ಆಗ ಅವರು ಮುಂದುಬಂದು

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

**ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.